ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ 24

Read,Share and Follow - www.belagavivaradi.com

Vol-04 Issue: 255 ₹ ಬೆಲೆ: 4 Sunday, 03, December,2023 newsbelagavi@gmail.com 9900332089 Regn,No:G-2/PMG/KA/NK/BM/139/2021-23

ದಲಿತ ಸಿಎಂ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು: ಸಚಿವ ಸತೀಶ್ ಜಾರಕಿಹೊಳಿ

ಶಿರಸಿ: ದಲಿತ ಸಿಎಂ ವಿಚಾರ ಹೈಕಮಾಂಡ್‌ಗೆ ಬಿಟ್ಟಿದ್ದು, ನಮ್ಮ ಅನಿಸಿಕೆ, ನಿರ್ಧಾರವನ್ನು ವರಿಷ್ಠರಿಗೆ ಹೇಳುತ್ತೇವೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹೇಳಿದರು.

ನಗರದಲ್ಲಿ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜಾತಿ ಆಧಾರದಲ್ಲಿ ಮುಖ್ಯಮಂತ್ರಿ ಮಾಡಲು ಆಗುವುದಿಲ್ಲ. ನಮಗೆ ಯಾವುದೇ ಅಸಮಾಧಾನವಿಲ್ಲ ಎಂದು ತಿಳಿಸಿದರು.

ಬಿ.ಕೆ. ಹರಿಪ್ರಸಾದ ಅವರನ್ನು ಕಡಗಣನೆ ಮಾಡಿಲ್ಲ. ಅವರು ಪಕ್ಷದಲ್ಲಿ ಹಿರಿಯರು, ರಾಷ್ಟ್ರ ರಾಜಕಾರಣದಲ್ಲಿ ಸುಮಾರು 30 ವರ್ಷ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರನ್ನು ಯಾರು ಕೆಳಗೆ ಇಳಿಸಲು ಆಗಲ್ಲ. ಅಂತಹ ವಾತಾವರಣ ನಮ್ಮ ಪಕ್ಷದಲ್ಲಿ ಇಲ್ಲಾ. ನಾನು ಅವರೊಂದಿಗೆ ಮಾತನಾಡಿದ್ದೇನೆ ಎಂದರು.

ಶಾಲೆಯಲ್ಲಿ ಬಲವಂತವಾಗಿ ಮೊಟ್ಟೆ ನೀಡುವ ಪ್ರಶ್ನೆಯೇ ಇಲ್ಲ. ಅವರ ಆಹಾರ ತಿನ್ನುವ ಹಕ್ಕು ಕಸಿದುಕೊಳ್ಳಲು ಆಗಲ್ಲ. ಅದಕ್ಕೆ ಪರ್ಯಾಯವಾಗಿ ಚಿಕ್ಕಿ, ಬಾಳೆ ಹಣ್ಣು ನೀಡಲಾಗುತ್ತೆ. ಇನ್ನೂ ಶಾಲೆಗಳಲ್ಲಿ ಜಾತಿ, ಧರ್ಮ ಹಬ್ಬಿಕೊಳ್ಳುತ್ತಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿ, ಜಾತಿ, ಧರ್ಮ ಮೀರಿ ನಾವು ಬದುಕಬೇಕಾಗಿದೆ. ಇದರಲ್ಲಿ ಎಲ್ಲರ ಸಾಮುಹಿಕ ಜವಾಬ್ದಾರಿಯೂ ಇದೆ ಎಂದು ತಿಳಿಸಿದರು.

ಡಿ. 4ರಂದು ರಾಜ್ಯ ರೈತ ಸಂಘದಿಂದ ಸುವರ್ಣ ಸೌಧಕ್ಕೆ ಮುತ್ತಿಗೆ: ರಾಜ್ಯಾಧ್ಯಕ್ಷ ಕೋಡಿಹಳ್ಳಿ



ದಾವಣಗೆರೆ: ರೈತರ ಬೇಡಿಕೆಗಳನ್ನು ಈಡೇರಿಸದ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹೋರಾಟ ಹಮ್ಮಿಕೊಂಡಿದ್ದು, ಬೆಳಗಾವಿ ಸುವರ್ಣ ಸೌಧದಲ್ಲಿ ನಡೆಯುವ ಚಳಿಗಾಲದ ಅಧಿವೇಶನದ ವೇಳೆ ಸುವರ್ಣ ಸೌಧಕ್ಕೆ ಡಿ. 04 ಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ರೈತ ಸಂಘದ ರಾಜ್ಯಾಧ್ಯಕ್ಷರಾದ ಕೋಡಿಹಳ್ಳಿ ಚಂದ್ರಶೇಖರ್ ಅವರು ಮಾಹಿತಿ ನೀಡಿದ್ದಾರೆ.

ದಾವಣಗೆರೆ ಜಿಲ್ಲೆಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳೇ ಉರುಳಿದೆ. ದುರಂತ ಎಂದರೆ ಚುನಾವಣೆ ವೇಳೆ ಕೊಟ್ಟ ಮಾತಿನಂತೆ ನಡೆಯದಿರುವ ಸರ್ಕಾರದ ನಡೆ ಖಂಡನೀಯ ಎಂದರು. ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರೈತರನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ರಾಜ್ಯದಲ್ಲಿ ಬರಗಾಲ ತಾಂಡವವಾಡುತ್ತಿದೆ. ಈ ಸಮಯದಲ್ಲಿ ರೈತರ ನೆರವಿಗೆ ಧಾವಿಸಬೇಕಾದ ಸರ್ಕಾರ ರೈತರನ್ನು ನಿರ್ಲಕ್ಷ್ಯ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬೆಳೆವಿಮೆ ಕೊಡಿಸುವ ದಿಕ್ಕಿನಲ್ಲಿ ಯಾವುದೇ ಕಾರ್ಯಕ್ರಮ ನೀಡಿಲ್ಲ. ಬೆಳೆ ರಕ್ಷಣೆ ಯೋಜನೆಗಳಿಲ್ಲ. ಆದರೆ, ಪಂಚರಾಜ್ಯಗಳ ಚುನಾವಣೆ ಇವರಿಗೆ ಮುಖ್ಯವಾಗಿದೆ ಎಂದು ಹರಿಹಾಯ್ದರು.

ಕೃಷಿ ಕಾಯ್ದೆ ವಾಪಸ್ ಪಡೆಯಲಿ: ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಕೃಷಿ ಕಾಯ್ದೆಗಳನ್ನು ರದ್ದು ಮಾಡುವುದಾಗಿ ಹೇಳಿ, ಈ ವೇಳೆ, ಅಂದು ವಿಪಕ್ಷದಲ್ಲಿದ್ದ ಕಾಂಗ್ರೆಸ್ ಪಕ್ಷವರು ರೈತರ ಜೊತೆ ಹೋರಾಟಕ್ಕೆ ಬಂದು ಬೆಂಬಲ ನೀಡಿದ್ದರು. ಕಾಯ್ದೆಯಿಂದ ರೈತರಿಗೆ ಅನ್ಯಾಯವಾಗಲಿದೆ ಎಂದಿದ್ದರು. ಇದೀಗ ಕಾಂಗ್ರೆಸ್ ಆಡಳಿತಕ್ಕೆ ಬಂದಿದೆ. ಆದರೆ, ರೈತರಿಗೆ ನೆರವಾಗುವ ರೀತಿ ನಡೆದುಕೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ ಆರಂಭವಾಗಲಿದ್ದು, ಈ ಅಧಿವೇಶನದಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಷರತ್ತು ಹಾಕಿದರು. ಕೃಷಿ ಕಾಯ್ದೆ ವಾಪಸ್ ಪಡೆಯಬೇಕು, ಬರಗಾಲದ ತುರ್ತು ಕಾರ್ಯಕ್ರಮಗಳು ಜಾರಿಗೆ ತರಬೇಕು. ಸೆಪ್ಟೆಂಬರ್ 22ರ ವಿದ್ಯುತ್ ಕಾಯ್ದೆ ವಾಪಸ್ ಪಡೆಯಬೇಕು. ಕಬ್ಬಿಗೆ ಎಪಿಆರ್ಪಿ ಜೊತೆ ಎಸ್‌ಎಪಿ ನೀಡಬೇಕು.

ರಾಜ್ಯದ ಕಬ್ಬಿನ ಇಳುವರಿಗೆ ಒಂದು ಕಾರ್ಖಾನೆಯಲ್ಲಿ ಒಂದೊಂದು ಧಾರಣೆ ನಿಲ್ಲಿಸಬೇಕು. ಬಗರ್ ಹುಕುಂ ಸಾಗುವಳಿ ತಕ್ಷಣವೇ ಜಾರಿ ಮಾಡಬೇಕು. ಮಹದಾಯಿ ಹಾಗೂ ಮೇಕೆದಾಟು ಕಾರ್ಯವನ್ನು ಶೀಘ್ರವೇ ಕೈಗೊಳ್ಳಬೇಕು. ರೈತರ ಕೃಷಿ ಪಂಪ್ ಸೆಟ್ಗಳಿಗೆ ಅಕ್ರಮ ಸಕ್ರಮದಡಿ ನೀಡುತ್ತಿದ್ದ ಟ್ರಾನ್ಸ್ ಫಾರಂ, ಕಂಬ, ವೈರ್ ಇತರೆ ಉಪಕರಣಗಳು ನೀಡುವುದನ್ನು ಸರ್ಕಾರ ರದ್ದುಗೊಳಿಸಿದೆ. ಈ ಎಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

4 ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ: ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: ಇಂದು ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದಲ್ಲಿ 4 ರಾಜ್ಯಗಳಲ್ಲಿ ಕಾಂಗ್ರೆಸ್ಸಿಗೆ ಬಹುಮತ ಬರುತ್ತೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯಿಸಿದ್ದಾರೆ.

ಮಾಧ್ಯಮದೊಂದಿಗೆ ಮಾತನಾಡಿದ ಅವರು, ಎಲ್ಲ ರಾಜ್ಯಗಳಲ್ಲೂ ಚುನಾವಣೆ ಚೆನ್ನಾಗಿ ಆಗಿದೆ. ನಮಗೆ ಬಂದಿರುವ ಫೀಡ್ ಬ್ಯಾಕ್ ಪ್ರಕಾರ ನಮಗೆ ನಾಲ್ಕು ರಾಜ್ಯಗಳಲ್ಲಿ ಜಯ ಸಿಗುತ್ತೆ, ಮಿಜೋರಾಂನಲ್ಲಿ ಅತಂತ್ರ ಆಗಬಹುದು. ಅದಕ್ಕಾಗಿ ನಾವು ಏನು ಊಹಿಸಿದ್ದೇವೋ ಅದರಂತೆ ಫಲಿತಾಂಶ ಬರಲಿದೆ.

ನಮಗೆ ಬಹುಮತ ಬರಲಿದೆ. ಆಯಾ ರಾಜ್ಯಗಳ ನಾಯಕರ ಜತೆ ಮಾತಾಡಿದ್ದೇನೆ, ಕಮಲ್ ನಾಥ್ ಜತೆಗೆ ಮಾತಾಡಿದ್ದೇನೆ, ವಿಪಕ್ಷ ನಾಯಕರುಗಳ ಜೊತೆ ಝೂಂ ಮೀಟಿಂಗ್ ಮಾಡಿ ಮಾತನಾಡಿದ್ದೇವೆ.

ಎಲ್ಲ ಕಡೆಯೂ ನಮಗೆ ಬಹುಮತ ಬರುತ್ತೆ ಅಂದಿದ್ದಾರೆ. ನಮ್ಮವರೆಲ್ಲಾ ತುಂಬಾ ಆತ್ಮವಿಶ್ವಾಸದಲ್ಲಿದ್ದಾರೆ ಎಂದಿದ್ದಾರೆ.

ಸಾಮಾಜಿಕ ನ್ಯಾಯದಲ್ಲಿ ರಾಜಿ ಇಲ್ಲ: ಸಿಎಂ ಸಿದ್ದರಾಮಯ್ಯ

ಬೆಂಗಳೂರು: ಯಾರೂ ಏನೇ ಹೇಳಿದರೂ ಸಾಮಾಜಿಕ ನ್ಯಾಯದಲ್ಲಿ ರಾಜಿ ಇಲ್ಲದೆ ಕೆಲಸ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಅಖಿಲ ಕರ್ನಾಟಕ ಗಾಣಿಗರ ಸಂಘ ಬೆಂಗಳೂರು ಇವರ ವತಿಯಿಂದ ಬೆಂಗಳೂರಿನ ಅಲಹಳ್ಳಿ ಅಂಜನಾಪುರದಲ್ಲಿ ಆಯೋಜಿಸಲಾಗಿದ್ದ ಸುವರ್ಣ ಮಹೋತ್ಸವ ಸಮಾರಂಭ ಮತ್ತು ಗಾಣಿಗ ಜನಾಂಗದ ಸಮಾವೇಶ, ನೂತನ ಕಟ್ಟಡ ಬ್ಲಾಕ್–1 ಉದ್ಘಾಟನೆ ಹಾಗೂ ಬ್ಲಾಕ್ –2 ಕಟ್ಟಡಕ್ಕೆ ಶಿಲಾನ್ಯಾಸ ನೆರವೇರಿಸಿ ಮಾತನಾಡಿದರು.

ಸಮಾಜದಲ್ಲಿ ಅವಕಾಶ ವಂಚಿತ ಜನರಿಗೆ, ಶತಶತಮಾನಗಳಿಂದ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿರುವವರು, ಸಾಮಾಜಿಕ ನ್ಯಾದಿಂದ ಇಂದಿಗೂ ವಂಚಿತರಾದ ಜನರ ಪರವಾಗಿ ನಾವು ಇರುತ್ತೇವೆ ಎಂದರು.

ಗಾಣಿಗರ ನಿಗಮ ಸ್ಥಾಪನೆ, ವಿಶ್ವಕರ್ಮ ಯೋಜನೆಯಡಿ ಗಾಣಿಗರನ್ನು ಬಿಟ್ಟಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಮನವಿ ಮಾಡಿದ್ದಾರೆ. ನಿಮ್ಮ ಸಮಾಜಕ್ಕೆ ಸೇರಿದ ಪ್ರಧಾನಿಗಳಿಗೆ ನಿಮ್ಮ ಸಮಸ್ಯೆ ಗೊತ್ತಿದೆಯೋ ಗೊತ್ತಿಲ್ಲ. ಆದರೆ ನಾನು ಕೂಡಲೇ ಪತ್ರ ಬರೆಯುತ್ತೇನೆ ಎಂದು ತಿಳಿಸಿದರು.

ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಜಾತಿ ಗಣತಿ ವರದಿಯನ್ನು ವೈಜ್ಞಾನಿಕವಾಗಿ ಸಿದ್ಧ ಮಾಡಿದ್ದು, ವರದಿಯನ್ನು ಇನ್ನೂ ನಾವು ಸ್ವೀಕಾರ ಮಾಡಿಲ್ಲ. ವರದಿಯನ್ನು ಸ್ವೀಕರಿಸಲೆಂದೇ ಆಯೋಗದ ಅವಧಿಯನ್ನು 2 ತಿಂಗಳು ಮುಂದುವರಿಸಲಾಗಿದೆ. ವರದಿ ಬಂದ ಮೇಲೆ ತೀರ್ಮಾನ ಕೈಗೊಳ್ಳಲಾಗುವುದು.

ಗಾಣಿಗರಿಗೆ ಹೆಚ್ಚಿನ ಸಹಾಯ ಮಾಡುವುದಾಗಿ ಭರವಸೆ ನೀಡಿದ ಸಿಎಂ, ನಿಮಗೆ ನ್ಯಾಯ ಕೊಡಿಸಲು ಸದಾ ನಿಮ್ಮೊಂದಿಗೆ ಇರುತ್ತೇನೆ. ಎಲ್ಲಾ ಜಾತಿಯ ಬಡವರಿಗೆ ಗ್ಯಾರಂಟಿಗಳನ್ನು ಒದಗಿಸಲಾಗಿದೆ ಎಂದರು. ಗಾಣಿಗ ಸಂಘದ ಅಧ್ಯಕ್ಷ ಎಂ.ಆರ್.ರಾಜಶೇಖರ್, ಮಾಜಿ ವಿಧಾನ ಪರಿಷತ್ ಸಭಾಪತಿ ವಿ.ಆರ್.ಸುದರ್ಶನ್, ಶಾರದಾ ಮೋ ಹನ್ ಶೆಟ್ಟಿ, ಡಾ: ವಾಸಂತಿ, ಮೈಸೂರಿನ ಮಾಜಿ ಮೇಯರ್ ಅನಂತ್, ರಮೇಶ್, ಎಂ.ಎಸ್.ಶ್ರೀ ನಿವಾಸಮೂರ್ತಿ ಮೊದಲಾದವರು ಉಪಸ್ಥಿತರಿದ್ದರು.

ಅಪ್ಪ–ಮಗನದ್ದು ಬರೀ ನಾಟಕ: ಯತ್ನಾಳ್ ಗರಂ

ವಿಜಯಪುರ: ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಹಾಗೂ ಅವರ ಪುತ್ರರಾದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ವಿರುದ್ಧ ವಿಜಯಪುರ ನಗರ ಬಿಜೆಪಿ ಶಾಸಕ ಬಸನಗೌಡ್ ಪಾಟೀಲ ಯತ್ನಾಳ್ ಮತ್ತೆ ವಾಗ್ದಾಳಿ ಮುಂದುವರೆಸಿದ್ದಾರೆ.

ವಿಜಯಪುರ ಆನಂದ ನಗರದ ಶ್ರೀ ದಾನಮ್ಮ ದೇವಿ ಜಾತ್ರಾ ಮಹೋತ್ಸವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿರುವ ಯತ್ನಾಳ, ಅಪ್ಪ–ಮಕ್ಕಳು ನಾಟಕ ಮಾಡಬೇಡಿ ಎಂದು ಈ ಹಿಂದೆಯೇ ಯಡಿಯೂರಪ್ಪ ಹಾಗೂ ವಿಜಯೇಂದ್ರಗೆ ನಾನು ಹೇಳಿದ್ದೆ. ರೈತರನ್ನು ನೋಡಿ ಅವರು ಕಣ್ಣೀರು ಹಾಕೋದು ನೋಡಿದರೆ ಅವರ ನಾಟಕ ಗೊತ್ತಾಗುತ್ತದೆ. ಪಕ್ಷದ ಎಲ್ಲ ಹುದ್ದೆಗಳು ಅವರ ಮನೆ ಮಕ್ಕಳಿಗೆ ಬೇಕು. ಈ ಹಿಂದೆ ಯಡಿಯೂರಪ್ಪರಿಗೆ ಮಾಜಿ ಸಿಎಂ ಎನ್ನುತ್ತಿದ್ದರು. ಈಗ ನಿಕಟಪೂರ್ವ ಎನ್ನುತ್ತಿದ್ದಾರೆ.

ಈ ನಿಕಟಪೂರ್ವ ಪದ ಬಳಕೆಗೆ ಯಡಿಯೂರಪ್ಪರೇ ಕಾರಣ ಎನ್ನುವ ಮೂಲಕ ಬಹಿರಂಗವಾಗಿ ಸ್ವಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಯಡಿಯೂರಪ್ಪರ ವಿರುದ್ಧ ಟೀಕೆ ಮಾಡಿದ್ದಾರೆ. ಬರೀ ಹೆದರಿಸೋದು, ನಾಟಕ ಮಾಡೋದು ಅವರ ಕೆಲಸ. ನನ್ನನ್ನು ಹೆದರಿಸಲು ಬಂದಿದ್ದರು. ಆದರೆ, ನಾನು ಯಾರಿಗೂ ಹೆದರೊಲ್ಲ. ನನ್ನ ಬಳಿಯೂ ಅವರ ದಾಖಲೆಗಳಿವೆ. ನನಗೆ ನನ್ನ ಕ್ಷೇತ್ರದ ಅಭಿವೃದ್ಧಿ ಮಾತ್ರ ಸಾಕು. ನನ್ನ ಮೇಲೆ ಜನ ವಿಶ್ವಾಸ ಇಟ್ಟು ಆಯ್ಕೆ ಮಾಡಿದ್ದಾರೆ ಎಂದು ಬಸನಗೌಡ ಪಾಟೀಲ್ ಹೇಳಿದರು.

ಇನ್ನು ಯಡಿಯೂರಪ್ಪರ ಕುಟುಂಬದ ವಿರುದ್ಧ ಯತ್ನಾಳ ಬಹಿರಂಗವಾಗಿ ಹೇಳಿಕೆ ನೀಡುತ್ತಿರುವುದು ಇದೇ ಮೊದಲಲ್ಲ. ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನವನ್ನು ಯಡಿಯೂರಪ್ಪ ಪುತ್ರ ವಿಜಯೇಂದ್ರಗೆ ನೀಡಿದಾಗಲೂ ಯತ್ನಾಳ ಅಸಮಾಧಾನ ಹೊರ ಹಾಕಿದ್ದರು.

ಪಿಎಸ್‌ಐ ಪಿಸ್ತೂಲ್ ಕಳವು ಮಾಡಿದ್ದ 3 ಆರೋಪಿಗಳ ಬಂಧನ

ಚಿತ್ರದುರ್ಗ: ಕೆ.ಆರ್.ಪುರಂ ಠಾಣೆ ಪಿಎಸ್‌ಐ ಕಲ್ಲಪ್ಪ ಪಿಸ್ತೂಲ್ ಕಳವು ಮಾಡಿದ್ದ ಮೂವರು ಆರೋಪಿಗಳನ್ನು ಬಂಧಿಸಿಲಾಗಿದೆ. 1 ಪಿಸ್ತೂಲ್, 10 ಗುಂಡು ವಶಕ್ಕೆ ಪಡೆಯಲಾಗಿದ್ದು, 3 ಜನ ಆರೋಪಿಗಳ (ಆರೋಪಿಗಳ ಹೆಸರು ಈವರೆಗೆ ತಿಳಿದು ಬಂದಿಲ್ಲ) ವಿಚಾರಣೆ ಮಾಡಲಾಗುತ್ತಿದೆ. ಹೊಳಲ್ಕೆರೆ ತಾಲೂಕಿನ ಗುಂಡೇರಿ ಗ್ರಾಮದವರು ಎಂದು ಪೊಲೀಸ್ ಮೂಲಗಳಿಂದ ಮಾಹಿತಿ ನೀಡಲಾಗಿದೆ.

ನಿನ್ನೆ ಚಿತ್ರದುರ್ಗ ತಾಲೂಕಿನ ಜಾನಕೊಂಡ ಗ್ರಾಮ ಬಳಿಯ ರೆಸ್ಟೋರೆಂಟ್ನಲ್ಲಿ ಪಿಸ್ತೂಲ್ ಕಳ್ಳತನವಾಗಿತ್ತು. ಚಿತ್ರದುರ್ಗ ಗ್ರಾಮಾಂತರ ಠಾಣೆಯಲ್ಲಿ ಕೇಸ್ ಕೂಡ ದಾಖಲಾಗಿತ್ತು.

ಶಿವಮೊಗ್ಗದಿಂದ ಬೆಂಗಳೂರಿಗೆ PSI ಕಲ್ಲಪ್ಪ ತೆರಳುತ್ತಿದ್ದರು. ಮಾರ್ಗಮಧ್ಯೆ ರೆಸ್ಟೋರೆಂಟ್ಗೆ ಊಟಕ್ಕೆ ತೆರಳಿದ್ದಾಗ ಪಿಸ್ತೂಲ್ ಕದ್ದೊಯ್ದಿದ್ದರು.

ಮಹಿಳಾ ನಾಯಕಿಯರ ಪರ ರಾಹುಲ್ ಗಾಂಧಿ ಬ್ಯಾಟಿಂಗ್

10 ವರ್ಷಗಳಲ್ಲಿ ಶೇ.50 ರಷ್ಟು ಮಹಿಳಾ ಸಿಎಂ ಗುರಿ

ಕೊಚ್ಚಿ: ಪಕ್ಷ ಸಂಘಟನೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನಮಾನ ನೀಡಬೇಕು ಮತ್ತು ಮುಂದಿನ 10 ವರ್ಷಗಳಲ್ಲಿ ಶೇಕಡಾ 50 ರಷ್ಟು ಮಹಿಳೆಯರನ್ನು ಮುಖ್ಯಮಂತ್ರಿಯಾಗಿಸುವ ಗುರಿ ಹೊಂದಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಹೇಳಿದ್ದಾರೆ.

ಕೇರಳ ಮಹಿಳಾ ಕಾಂಗ್ರೆಸ್ ಸಮಾವೇಶ 'ಉತ್ಸಾಹ್' ಉದ್ಘಾಟಿಸಿ ಮಾತನಾಡಿದ ವಯನಾಡ್ ಸಂಸದ, ತಮ್ಮ ಪಕ್ಷದಲ್ಲಿ ಮುಖ್ಯಮಂತ್ರಿಯಾಗಲು ಅಗತ್ಯವಾದ ಗುಣಗಳನ್ನು ಹೊಂದಿರುವ ಹಲವಾರು ಮಹಿಳಾ ನಾಯಕರಿದ್ದಾರೆ ಎಂದು ಹೇಳಿದರು.

"ಇಂದಿನಿಂದ ಮುಂದಿನ 10 ವರ್ಷಗಳಲ್ಲಿ ನಮ್ಮ ಪಕ್ಷದ ಮುಖ್ಯಮಂತ್ರಿಗಳಲ್ಲಿ ಶೇ. 50 ರಷ್ಟು ಮಹಿಳೆಯರು ಇರಬೇಕು ಎಂಬುದು ನಮ್ಮ ಗುರಿ. ಇದು ಕಾಂಗ್ರೆಸ್ ಪಕ್ಷದ ಉತ್ತಮ ಗುರಿ ಎಂದು ನಾನು ಭಾವಿಸಿದ್ದೇನೆ... ಇಂದು ನಮ್ಮಲ್ಲಿ ಒಬ್ಬ ಮಹಿಳಾ ಮುಖ್ಯಮಂತ್ರಿ ಇಲ್ಲ. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಉತ್ತಮ ಮುಖ್ಯಮಂತ್ರಿಯಾಗುವ ಗುಣ ಹೊಂದಿರುವ ಅನೇಕ ಮಹಿಳೆಯರು ಇದ್ದಾರೆ" ಎಂದು ರಾಹುಲ್ ಗಾಂಧಿ ಹೇಳಿದರು.

ಇದೇ ವೇಳೆ ಆರ್‌ಎಸ್‌ಎಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕಾಂಗ್ರೆಸ್ ಮಾಜಿ ಅಧ್ಯಕ್ಷ, ಇದು ಸಂಪೂರ್ಣವಾಗಿ ಪುರುಷ ಸಂಘಟನೆ ಎಂದರು.

"ಮಹಿಳೆಯರು ಅನೇಕ ವಿಧಗಳಲ್ಲಿ ಪುರುಷರಿಗಿಂತ ಶ್ರೇಷ್ಠರು ಎಂದು ನಾನು ಭಾವಿಸುತ್ತೇನೆ. ಅವರು ಪುರುಷರಿಗಿಂತ ಹೆಚ್ಚು ತಾಳ್ಮೆಯನ್ನು ಹೊಂದಿದ್ದಾರೆ. ಅವರು ಪುರುಷರಿಗಿಂತ ದೀರ್ಘಾವಧಿಯ ದೃಷ್ಟಿಕೋನವನ್ನು ಹೊಂದಿದ್ದಾರೆ. ಅವರು ಪುರುಷರಿಗಿಂತ ಹೆಚ್ಚು ಸಂವೇದನಾಶೀಲರು ಮತ್ತು ಸಹಾನುಭೂತಿ ಹೊಂದಿದ್ದಾರೆ. ಮಹಿಳೆಯರು ಅಧಿಕಾರ ರಚನೆಯ ಭಾಗವಾಗಿರಬೇಕು ಎಂದು ನಾವು ಮೂಲಭೂತವಾಗಿ ನಂಬುತ್ತೇವೆ. ಮಹಿಳೆಯರನ್ನು ಅಧಿಕಾರದಿಂದ ದೂರವಿಡುವುದು ಆರ್ ಎಸ್‌ಎಸ್ ಸಿದ್ಧಾಂತ" ಎಂದು ಆರೋಪಿಸಿದರು.

ಆದಿತ್ಯ–ಎಲ್1ನಲ್ಲಿ ಕಾರ್ಯಾಚರಣೆ ಆರಂಭಿಸಿದ ಸೋಲಾರ್ ವಿಂಡ್ ಪೇಲೋಡ್: ಇಸ್ರೋ

ಬೆಂಗಳೂರು: ಭಾರತದ ಆದಿತ್ಯ–ಎಲ್–1 ಉಪಗ್ರಹದಲ್ಲಿ ಸೋಲಾರ್ ವಿಂಡ್ ಪಾರ್ಟಿಕಲ್ ಎಕ್ಸ್‌ಪೆರಿಮೆಂಟ್ ಪೇಲೋಡ್ ತನ್ನ ಕಾರ್ಯಾಚರಣೆಯನ್ನು ಆರಂಭಿಸಿದ್ದು, ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಇಸ್ರೋ ಮಾಹಿತಿ ನೀಡಿದೆ.

ಇಸ್ರೋದ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (PSLV-C57) ಸೆಪ್ಟೆಂಬರ್ 2ರಂದು ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ಕೇಂದ್ರದಿಂದ ಆದಿತ್ಯ–L1 ಬಾಹ್ಯಾಕಾಶ ನೌಕೆಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿತ್ತು.

ಆದಿತ್ಯ–L1 ಭೂಮಿಯಿಂದ ಸುಮಾರು 1.5 ಮಿಲಿಯನ್ ಕಿಮೀ ದೂರದಲ್ಲಿರುವ ಮೊದಲ ಸೂರ್ಯ–ಭೂಮಿಯ ಲಗ್ರಾಂಜಿಯನ್ ಪಾಯಿಂಟ್ (L1) ಸುತ್ತ ಕರೋನಲ್ ಕಕ್ಷೆಯಿಂದ ಸೂರ್ಯನನ್ನು ಅಧ್ಯಯನ ಮಾಡುವ ಮೊದಲ ಭಾರತೀಯ ಬಾಹ್ಯಾಕಾಶ–ಆಧಾರಿತ ವೀಕ್ಷಣಾಲಯವಾಗಿದೆ. ಆದಿತ್ಯ ಸೌರ ಮಾರುತ ಕಣ ಪ್ರಯೋಗ (ASPEX) ಎರಡು ಅತ್ಯಾಧುನಿಕ ಉಪಕರಣಗಳನ್ನು 'ಸೋಲಾರ್ ವಿಂಡ್ ಐಯಾನ್ ಸ್ಪೆಕ್ಟ್ರೋಮೀಟರ್ (SWIS) ಮತ್ತು ಸುಪ್ರಥರ್ಮಲ್ ಮತ್ತು ಎನರ್ಜಿಟಿಕ್ ಪಾರ್ಟಿಕಲ್ ಸ್ಪೆಕ್ಟ್ರೋಮೀಟರ್ (STEPS) ಒಳಗೊಂಡಿದೆ ಎಂದು ಇಸ್ರೋ ಹೇಳಿಕೆಯಲ್ಲಿ ತಿಳಿಸಿತ

36 ಲಕ್ಷ ಮತದಾರರಿಗೆ ಕರ್ನಾಟಕ ರಾಜ್ಯ ಚುನಾವಣಾ ಆಯೋಗ ನೋಟಿಸ್

ಬೆಂಗಳೂರು: ಮತದಾರರ ಪಟ್ಟಿಯಲ್ಲಿ ಹೆಸರು ನಕಲು ಮಾಡಿರುವ ಅಥವಾ ಎರಡು ಕಡೆ ಮತದಾರರ ಪಟ್ಟಿಯಲ್ಲಿ ಹೆಸರಿರುವ 36 ಲಕ್ಷ ಮತದಾರರಿಗೆ ರಾಜ್ಯ ಚುನಾವಣಾ ಆಯೋಗವು ಭಾರತೀಯ ಅಂಚೆ ಮೂಲಕ ನೋಟಿಸ್ ನೀಡುವ ಪ್ರಕ್ರಿಯೆಯನ್ನು ಆರಂಭಿಸಿದೆ.

ಹೆಚ್ಚುವರಿಯಾಗಿ, ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣೆಗೆ ಸ್ಪೀಡ್ ಪೋಸ್ಟ್ ಮೂಲಕ 40 ಲಕ್ಷ ಚುನಾವಣಾ ಫೋಟೋ ಗುರುತಿನ ಚೀಟಿಗಳನ್ನು (ಇಪಿಐಸಿ) ರವಾನಿಸುತ್ತಿದೆ. ಇಪಿಐಸಿಗಳು ಮತ್ತು ನೋಟಿಸ್‌ಗಳ ಬುಕಿಂಗ್ ಮತ್ತು ವಿತರಣೆಗಾಗಿ ಅಂಚೆ ಇಲಾಖೆ ಮತ್ತು ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಗಳ ನಡುವೆ ಈ ಹಿಂದೆ ಸಹಿ ಮಾಡಿದ ತಿಳುವಳಿಕಾ ಒಪ್ಪಂದವನ್ನು ಅನುಸರಿಸುತ್ತಿದೆ.

ಈ ಬಗ್ಗೆ ಕರ್ನಾಟಕದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ), ಮನೋಜ್ ಕುಮಾರ್ ಮೀನಾ ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್‌ಗೆ ಮಾಹಿತಿ ನೀಡಿದ್ದು, ಒಬ್ಬ ವ್ಯಕ್ತಿ ಒಂದಕ್ಕಿಂದ ಹೆಚ್ಚು ಗುರುತಿನ ಚೀಟಿ, ಅಥವಾ ಒಂದೇ ಕ್ಷೇತ್ರದ ವ್ಯಾಪ್ತಿಯಲ್ಲಿ ಕಂಡುಬಂದಿವೆ. ರಾಜ್ಯದಾದ್ಯಂತ ಮತದಾರರ ಯಾವುದೇ ರೀತಿಯ ನಕಲು

ತೆಗೆದುಹಾಕಲು ನಾವು ಉತ್ಸುಕರಾಗಿದ್ದೇವೆ ಮತ್ತು ನಮ್ಮ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಹೆಸರುಗಳನ್ನು ಹೊಂದಿರುವ ಎಲ್ಲಾ ಮತದಾರರಿಗೆ ನೋಟಿಸ್‌ಗಳನ್ನು ನೀಡಿದ್ದೇವೆ ಎಂದು ಅವರು ಹೇಳಿದರು.

ರಾಜ್ಯದ 150 ಕ್ಕೂ ಹೆಚ್ಚು ಅಂಚೆ ಕಚೇರಿಗಳಲ್ಲಿ ಚುನಾವಣಾ ಆಯೋಗದಿಂದ ಸಾರ್ವಜನಿಕರಿಗೆ ನೋಟಿಸ್‌ಗಳ ಬುಕ್ಕಿಂಗ್ ಪ್ರಾರಂಭವಾಗಿದೆ ಎಂದು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ (ಸಿಪಿಎಂಜಿ) ಕೆ ಪ್ರಕಾಶ್ ಹೇಳಿದ್ದಾರೆ. "ಈ ನೋಟೀಸ್‌ಗಳು ಮತದಾರರ ಪಟ್ಟಿಯಲ್ಲಿರುವ ಬಹು ನಮೂದುಗಳ ತೆಗೆದುಹಾಕುವಿಕೆ ಮತ್ತು ರಾಜ್ಯದಿಂದ ಹೊರಗೆ ಸ್ಥಳಾಂತರಗೊಂಡಿದ್ದೂ ನಮ್ಮ ಪಟ್ಟಿಯಲ್ಲಿ ಇನ್ನೂ ಅವರ ಹೆಸರುಗಳನ್ನು ಹೊಂದಿರುವ ಮತದಾರರ ಬಗ್ಗೆ ವ್ಯವಹರಿಸುತ್ತದೆ. ನಾವು ಒಂದು ವಾರದ ಅವಧಿಯಲ್ಲಿ 4.5 ಲಕ್ಷ ನೋಟಿಸ್‌ಗಳ ಬುಕಿಂಗ್‌ಗಳನ್ನು ಸ್ವೀಕರಿಸಿದ್ದೇವೆ. ಆಯೋಗದಿಂದ ಸರಿಸುಮಾರು 36 ಲಕ್ಷ ನೋಟಿಸ್‌ಗಳು ಬುಕ್ ಆಗುವ ನಿರೀಕ್ಷೆಯಿದೆ ಎಂದು ನಮಗೆ ತಿಳಿಸಲಾಗಿದೆ. ಅವೆಲ್ಲವನ್ನೂ ಕಡಿಮೆ ಅವಧಿಯಲ್ಲಿ ವಿತರಿಸಲಾಗುವುದು. ಸದ್ಯಕ್ಕೆ ಗರಿಷ್ಠ ಸಂಖ್ಯೆಯ ನೋಟಿಸ್‌ಗಳು ಬೆಂಗಳೂರು ದಕ್ಷಿಣ ಕ್ಷೇತ್ರಕ್ಕೆ ಬುಕ್ ಆಗಿವೆ ಎಂದು ಪ್ರಕಾಶ್ ತಿಳಿಸಿದ್ದಾರೆ.

ರಾಜ್ಯ ಚುನಾವಣೆಗಳು ನಡೆದ ನಂತರ ಈ ವರ್ಷ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಆಯೋಗದಿಂದ 11.55 ಲಕ್ಷ ಇಪಿಐಸಿಗಳನ್ನು ನೀಡಲಾಗಿದೆ. ಇಲ್ಲಿಯವರೆಗೆ, ಕರ್ನಾಟಕದಲ್ಲಿ ಸರಿಸುಮಾರು 32 ಲಕ್ಷ ಮತದಾರರ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ ಎಂದು ಸಿಇಒ ಹೇಳಿದರು. ರಾಜ್ಯದಾದ್ಯಂತ 84 ಚುನಾವಣಾ ನೋಂದಣಿ ಕಚೇರಿ (ERO) ಸ್ಥಳಗಳಲ್ಲಿ ಇಕಖಅಗಳು ಮತ್ತು ನೋಟೀಸ್‌ಗಳ ಬುಕಿಂಗ್ ಅನ್ನು ಅನುಮತಿಸಲಾಗಿದೆ ಎಂದು ಅಕಒಉ ಹೇಳಿಕೆಯಲ್ಲಿ ಸೇರಿಸಲಾಗಿದೆ.

ವಿ–ಗಾರ್ಡ್ ಇನ್ಸೈಟ್ ಜಿ ಪ್ರೀಮಿಯಂ, ಸ್ಲಿಮ್ ಬಿಎಲ್‌ಡಿಸಿ ಫ್ಯಾನ್ ಗಳನ್ನು ಅನಾವರಣ

ಹುಬ್ಬಳ್ಳಿ: ಭಾರತದ ಪ್ರಮುಖ ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಹೋಂ ಅಪ್ಲಯನ್ಸಸ್ ಗಳ ಪ್ರಮುಖ ಮಾರಾಟಗಾರರಾದ ವಿ–ಗಾರ್ಡ, ಕರ್ನಾಟಕದ ಹುಬ್ಬಳ್ಳಿಯಲ್ಲಿ ತನ್ನ ಪ್ರೀಮಿಯಂ ಬಿಎಲ್‌ಡಿಸಿ ಹೈ–ಸ್ಪೀಡ್ ಫ್ಯಾನ್, ಇನ್ ಸೈಟ್–ಜಿ ಅನಾವರಣಗೊಳಿಸಿದೆ.

ಫ್ಯಾನ್ ಉದ್ಯಮವು ಸುಮಾರು 12,000 ಕೋಟಿಗಳಷ್ಟಿದ್ದು, 8–9% ಸಿಎಜಿಆರ್‌ನಲ್ಲಿ ಬೆಳೆಯುತ್ತಿದೆ. ಬಿಎಲ್‌ಡಿಸಿ ವಿಭಾಗವು 1500 ಕೋಟಿ (ಎಲ್ ವೈ) ಮೌಲ್ಯವನ್ನು ಹೊಂದಿದೆ, ಸೀಲಿಂಗ್ವಿ ಭಾಗದಲ್ಲಿ 45% ನಸಿಎಜಿಆರ್‌ಬೆಳವಣಿಗೆ ದಾಖಲಿಸಿದೆ. ಸಾಂಪ್ರದಾಯಿಕ ಇಂಡಕ್ಷನ್ಫ್ಯಾನ್‌ಗಳಿಂದ ಬಿಎಲ್‌ಡಿಸಿ ವಿಭಾಗಕ್ಕೆ ಮಾದರಿ ಬದಲಾವಣೆ ಬೆಳೆಯುತ್ತಿದೆ.

ಇನ್ ಸೈಟ್–ಜಿಬಿಎಲ್‌ಡಿಸಿ ಫ್ಯಾನ್ಸೌಂದರ್ಯ ಶಾಸ್ತ್ರಮತ್ತು ದಕ್ಷತೆಯ ಅದ್ಭುತ ಮಿಶ್ರಣವಾಗಿದೆ. ಈ ಸ್ಲಿಮ್ ಅದ್ಭುತವು ಆಕರ್ಷಕವಾದ ವುಡ್ ಫಿನಿಶಿಂಗ್ ಒಳಗೊಂಡಂತೆ 12 ಆಕರ್ಷಕ ಬಣ್ಣಗಳಲ್ಲಿ ಲಭ್ಯವಿದೆ, ಇದು ನಿರಂತರವಾಗಿ ವಿಕಸನಗೊಳ್ಳುತ್ತಿರುವ ಗ್ರಾಹಕರ ವಿವೇಚನಾಶೀಲ ಅಭಿರುಚಿಗೆ ಅನುಗುಣವಾಗಿ ಒಳಾಂಗಣ ಅಲಂಕಾರವನ್ನು ಪೂರ್ಣಗೊಳಿಸುತ್ತದೆ. ಇದರೊಂದಿಗೆ, ಇದು ಭರವಸೆಯ 5–ವರ್ಷದ ವಾರಂಟಿ ಮತ್ತು 5–ಸ್ಟಾರ್ರೇಟಿಂಗ್‌ನಿಂದ ಬೆಂಬಲಿತವಾಗಿದೆ.

ಇನ್‌ಸೈಟ್ಜಿಫ್ಯಾನ್ ಅತ್ಯಲ್ಪ 35 ವ್ಯಾಟ್‌ಗಳ ಶಕ್ತಿಯನ್ನು ಬಳಸುತ್ತದೆ, ಇದು ಗ್ರಾಹಕರಿಗೆ ವಿದ್ಯುತ್ಬಿಲ್ ಉಳಿಸಲು ನೆರವಾಗುತ್ತದೆ, ಈ ಮೂಲಕ ವಾರ್ಷಿಕವಾಗಿ ರೂ 1518/– ವರೆಗಿನ ಉಳಿತಾಯವನ್ನು ನೀಡುತ್ತದೆ (ಬಳಕೆಯ ಮಾದರಿಗಳು ಮತ್ತು ಅನ್ವಯವಾಗುವ ವಿದ್ಯುತ್ಶುಲ್ಕಗಳ ಮೇಲೆ ಅವಲಂಬಿತವಾದ ನಿಜವಾದ ಉಳಿತಾಯ). ಎಡ್ಜ್ರೂರ್ಕಿ

ಸೌಲಭ್ಯವು 2.25 ಲಕ್ಷಚದರ ಅಡಿಗಳಷ್ಟು ಜಾಗವನ್ನು ಹೊಂದಿದೆ, ಇದು ಗುಣಮಟ್ಟ ಮತ್ತು ನಾವೀನ್ಯತೆಯ ಬಗ್ಗೆ ವಿ–ಗಾರ್ಡ್‌ನ ಸಮರ್ಪಣೆಗೆ ಉದಾಹರಣೆಯಾಗಿದೆ. ಇದರ ಇತರ ಗಮನಾರ್ಹ ವೈಶಿಷ್ಟ್ಯಗಳೆಂದರೆ 370 ಆರ್ ಪಿ ಎಂನೊಂದಿಗೆ ಹೆಚ್ಚಿನ ವೇಗದ ಮೋಟಾರ್, ಸುಲಭವಾದ ಶುಚಿಗೊಳಿಸುವಿಕೆಗಾಗಿ ಪರಿಣಾಮಕಾರಿ ಧೂಳು–ನಿವಾರಕ ಕೋಟಿಂಗ್, ಚಳಿಗಾಲಕ್ಕಾಗಿ ರಿವರ್ಸ್‌ಮೋಡಾ ಕಾರ್ಯಾಚರಣೆ, ಒಂದು ಅಂತರ್ಗತ ಬಳಕೆದಾರ ಇಂಟರ್ಫೇಸಾ ಹಾಗೂ ಟೈಮರ್ ಆಯ್ಕೆಗಳೊಂದಿಗೆ ಬಳಕೆದಾರ ಸ್ನೇಹಿರಿ ಮೋಟ್ಕಂ ಟ್ರೋಲ್ ಹೊಂದಿದೆ. ಫ್ಯಾನ್ಬ್ಲೇಡ್, ಬ್ರೀಜ್ಮೋಡ್, ಸ್ಲೀಪ್ಮೋಡ್, ಸ್ಟ್ಯಾಂಡರ್ಡ್ಮೋಡ ಮತ್ತು ಕಸ್ಟಮೋಡ್ಸೇರಿ ದಂತೆ ಅನೇಕ ಕಾರ್ಯಾಚರಣೆಯ ವಿಧಾನಗಳನ್ನು ಸಹ ನೀಡುತ್ತದೆ, ಇದು ನಿಜವಾಗಿಯೂ ವಿಶಿಷ್ಟ ವಿಧವಾದ ಫ್ಯಾನ್ ಆಗಿದೆ.

ಹುಬ್ಬಳ್ಳಿಯ ಅನಂತ್ಧಿ ಗ್ರ್ಯಾಂಡ್ಹೋಟೆಲ್‌ನಲ್ಲಿ ನಡೆದ ವರ್ಣಮಯ ಸಮಾರಂಭದಲ್ಲಿ ಈ ಕಲಾತ್ಮಕವಾಗಿ ರಚಿಸಲಾದ ಫ್ಯಾನ್‌ಅನ್ನು ಬಿಡುಗಡೆ ಮಾಡಲಾಯಿತು.

ವಿ–ಗಾರ್ಡ್‌ಇಂಡಸ್ಟ್ರೀ ಸ್ಲಿಮಿಟೆಡ್ ನಿರ್ದೇಶಕರು ಮತ್ತು ಸಿಓಓ ಶ್ರೀರಾಮಚಂದ್ರನ್ವಿ, ಹೀಗೆ ಹೇಳಿದ್ದಾರೆ "ಇದು ಕೇವಲ ಅಭಿಮಾನಿ ಅಲ್ಲ, ಇದು ಜೀವನ ಶೈಲಿಯ ನವೀಕರಣವಾಗಿದೆ, ಸೌಕರ್ಯ, ಸೊಬಗು ಮತ್ತು ನಾವೀನ್ಯತೆಯನ್ನು ಹೊಂದಿದೆ. ಹರಿದ್ವಾರದ ರೂರ್ಕಿಯಲ್ಲಿರುವ ನಮ್ಮ ಅತ್ಯಾಧುನಿಕ ಫ್ಯಾಕ್ಟರಿಯಿಂದ ಇನ್ ಸೈಟ್ಜಿ ಅನ್ನು ಸೂಕ್ಷ್ಮವಾಗಿ ರಚಿಸಲಾಗಿದೆ. ಇದು ಭಾರತೀಯ ಮನೆಗಳ ವಾಸದ ಸ್ಥಳಗಳನ್ನು ಅಲಂಕರಿಸಲು ಅದ್ಭುತವಾದ ಸೌಂದರ್ಯ ಶಾಸ್ತ್ರದೊಂದಿಗೆ ಅತ್ಯಾಧುನಿಕ ತಂತ್ರಜ್ಞಾನವನ್ನು ನೀಡುತ್ತದೆ. ನಾವು ಮುನ್ನಡೆಯುತ್ತಿರುವಂತೆ, ಮುಂದಿನ ಪೀಳಿಗೆಯ ಗ್ರಾಹಕರ ವೈವಿಧ್ಯಮಯ ಅವಶ್ಯಕತೆಗಳನ್ನು ಪೂರೈಸುವ ಐಓಟಿ/ ಸ್ಮಾರ್ಟ್ರೂಪಾಂತರಗಳನ್ನು ನಾವು ಪರಿಚಯಿಸುತ್ತೇವೆ.

ವಿ–ಗಾರ್ಡ್ ನಿಂದ ಬಿ ಎಲ್ ಡಿ ಸಿ ವಿಭಾಗದಲ್ಲಿ ಇನ್‌ಸೈಟ್ಜಿ ದೃಢವಾದ ವಿವರಣೆಯನ್ನು ಗುರುತಿಸುತ್ತದೆ, ನಾವೀನ್ಯತೆ ಮತ್ತು ಪರಿಸರ ರಕ್ಷಣೆಯೆಡೆಗೆ ಅದರಬದ್ಧತೆಯ ಆಧಾರವಾಗಿದೆ.

ಮುಂಬೈ: ಮೆಕ್ಸಿಕನ್ ಮಹಿಳಾ ಡಿಜೆ ಮೇಲೆ ಅತ್ಯಾಚಾರ: ವ್ಯಕ್ತಿ ಬಂಧನ

ಮುಂಬೈ: 31 ವರ್ಷದ ಮೆಕ್ಸಿಕನ್ ಮಹಿಳಾ ಡಿಸ್ಕ್ ಜಾಕಿ (ಡಿಜೆ) ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. 35 ವರ್ಷದ ಆರೋಪಿ ಕೂಡ ಡಿಜೆ ಆಗಿದ್ದು, ಸಂತ್ರಸ್ತೆ ಕಳೆದ ವಾರ ಆತನ ವಿರುದ್ಧ ದೂರು ನೀಡಿದ ನಂತರ ಶುಕ್ರವಾರ ಆತನನ್ನು ಬಂಧಿಸಲಾಗಿದೆ ಎಂದು ಬಾಂದ್ರಾ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ದೂರಿನ ಪ್ರಕಾರ, ಆರೋಪಿಯು 2019 ರಿಂದ ಹಲವಾರು ಸಂದರ್ಭಗಳಲ್ಲಿ ಮಹಿಳೆಯ ಮೇಲೆ ಅತ್ಯಾಚಾರವೆಸಗಿದ್ದಾನೆ. ಮಹಿಳೆ ಪ್ರಸ್ತುತ ಮುಂಬೈನಲ್ಲಿ ವಾಸಿಸುತ್ತಿದ್ದು, ಆರೋಪಿ ಆಕೆಯ ಮ್ಯಾನೇಜರ್ ಎಂದು ಹೇಳಿದ್ದಾರೆ.

"2017 ರಲ್ಲಿ ಸಾಮಾಜಿಕ ಮಾಧ್ಯಮದ ಮೂಲಕ ಆರೋಪಿಯನ್ನು ಭೇಟಿಯಾಗಿದ್ದೆ ಎಂದು ಮಹಿಳೆ ತನ್ನ ದೂರಿನಲ್ಲಿ ತಿಳಿಸಿದ್ದಾರೆ. ಅವರು ಜುಲೈ 2019 ರಲ್ಲಿ ಬಾಂದ್ರಾದ ತನ್ನ ಮನೆಯಲ್ಲಿ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ, ನಂತರ ಅವರು ಅನೇಕ ಸಂದರ್ಭಗಳಲ್ಲಿ ಅತ್ಯಾಚಾರ ಎಸಗಿದ್ದಾರೆ.

ಆರೋಪಿಯು ತನ್ನನ್ನು ನಿರಾಕರಿಸಿದರೆ ಕೆಲಸದಿಂದ ಹೊರಹಾಕುವುದಾಗಿ ಬೆದರಿಕೆ ಹಾಕುವ ಮೂಲಕ ತನ್ನ ಮೇಲೆ ಬಲವಂತವಾಗಿ ಅತ್ಯಾಚಾರ ಮಾಡುತ್ತಿದ್ದ. ಅಲ್ಲದೆ ತನ್ನ ಮೇಲಿನ ಅತ್ಯಾಚಾರವನ್ನು ಮೊಬೈಲ್ ನಲ್ಲಿ ಚಿತ್ರೀಕರಿಸಿದ್ದು, ಅದನ್ನು ತೋರಿಸಿ ಬ್ಲಾಕ್ ಮೇಲ್ ಮಾಡಿ ಪದೇ ಪದೇ ಅತ್ಯಾಚಾರ ಮಾಡುತ್ತಿದ್ದ ಎಂದು ಆರೋಪಿಸಿದ್ದಾರೆ.

2020ರಲ್ಲಿ ಆತ ಬೇರೊಬ್ಬ ಮಹಿಳೆಯನ್ನು ಮದುವೆಯಾಗಿದ್ದರೂ, ಆರೋಪಿ ತನಗೆ ಅಸಭ್ಯ ಅನುಚಿತ ಚಿತ್ರಗಳನ್ನು ಕಳುಹಿಸುತ್ತಿದ್ದ. ಅಲ್ಲದೆ ಆಕೆಯಿಂದ ಲೈಂಗಿಕ ಬೇಡಿಕೆಗಳನ್ನು ಪೂರೈಸಿಕೊಳ್ಳುತ್ತಿದ್ದ. ದೂರಿನಲ್ಲಿ ಆರೋಪಿಸಿದ್ದಾರೆ.

20 ಲಕ್ಷ ರೂ. ಲಂಚ ಸ್ವೀಕರಿಸಿದ ಇಡಿ ಅಧಿಕಾರಿ

ಮಧುರೈ: 20 ಲಕ್ಷ ರೂಪಾಯಿ ಲಂಚ ಸ್ವೀಕರಿಸಿದ ಆರೋಪದ ಮೇಲೆ ಜಾರಿ ನಿರ್ದೇಶನಾಲಯ(ಇಡಿ)ದ ಅಧಿಕಾರಿಯನ್ನು ತಮಿಳುನಾಡು ಪೊಲೀಸರು ಶುಕ್ರವಾರ ದಿಂಡಿಗಲ್–ಮಧುರೈ ಹೆದ್ದಾರಿಯಲ್ಲಿ ಎಂಟು ಕಿಲೋಮೀಟರ್ ಚೇಸ್ ಮಾಡಿ ಬಂಧಿಸಿದ್ದಾರೆ.

ದಿಂಡಿಗಲ್ ಜಿಲ್ಲೆಯ ಸರ್ಕಾರಿ ವೈದ್ಯರ ಅಕ್ರಮ ಆದಾಯ ಪ್ರಕರಣದ ತನಿಖೆ ನಡೆಸುತ್ತಿದ್ದ ಇಡಿ ಅಧಿಕಾರಿ ಅಂಕಿತ್ ತಿವಾರಿ ಅವರನ್ನು ತಮಿಳುನಾಡು ಭ್ರಷ್ಟಾಚಾರ ನಿಗ್ರಹ ವಿಭಾಗ – ವಿಜಿಲೆನ್ಸ್ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯ(ಡಿವಿಎಸಿ) ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಹೆದ್ದಾರಿಯಲ್ಲಿ ಡ್ರಾಪ್–ಆಫ್ ಪಾಯಿಂಟ್‌ನಲ್ಲಿ ಲಂಚದ ಮೊದಲ ಕಂತು 20 ಲಕ್ಷ ರೂಪಾಯಿ ಸ್ವೀಕರಿಸಿದ ನಂತರ ಇಡಿ ಅಧಿಕಾರಿಯ ಕಾರ್ ಚೇಸ್ ಮಾಡಿ ಬಂಧಿಸಲಾಗಿದೆ. ಡಿವಿಎಸಿ ಅಧಿಕಾರಿಗಳು ಮಧುರೈನಲ್ಲಿರುವ ಇಡಿ ಉಪವಿಭಾಗೀಯ ಕಚೇರಿ ಮತ್ತು ಬಂಧಿತ ಇಡಿ ಅಧಿಕಾರಿ ಅಂಕಿತ್ ತಿವಾರಿ ಅವರ ನಿವಾಸದ ಮೇಲೂ ದಾಳಿ ನಡೆಸಿದ್ದಾರೆ.

2016–ಬ್ಯಾಚ್ ನ ಅಧಿಕಾರಿ ತಿವಾರಿ ಅವರು ಈ ಹಿಂದೆ ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಮಧುರೈನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿಂಡಿಗಲ್‌ನ ಸರ್ಕಾರಿ ವೈದ್ಯರೊಬ್ಬರಿಂದ 20 ಲಕ್ಷ ರೂಪಾಯಿ ಲಂಚ ಸ್ವೀಕರಿಸಿದ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ.

ಪ್ರಧಾನಿ ಮೋದಿ ಜೊತೆ ಸೆಲ್ಫೀ: ಒಳ್ಳೆಯ ಸ್ನೇಹಿತ ಎಂದು ಪೋಸ್ಟ್ ಮಾಡಿದ ಇಟಲಿ ಪ್ರಧಾನಿ ಮೆಲೋನಿ

ದುಬೈ: ಸಿಓಪಿ 28 ಶೃಂಗಸಭೆಗೆ ದುಬೈಗೆ ಭೇಟಿ ನೀಡಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರು ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದಾರೆ.

ಪ್ರಧಾನಿ ಮೋದಿ ಜೊತೆ ಸೆಲ್ಫೀ ಕ್ಲಿಕ್ಕಿಸಿಕೊಂಡಿರುವ ಮೆಲೋನಿ ಅವರು, ತಮ್ಮ ಇನ್ ಸ್ಟಾಗ್ರಾಂ ಖಾತೆಯಲ್ಲಿ ಹಂಚಿಕೊಂಡಿದ್ದು, "ಗುಡ್ ಫ್ರೆಂಡ್ಸ್ ಎಟ್ ಸಿಓಪಿ28 #ಮೆಲೋಡಿ" ಎಂಬ ಶೀರ್ಷಿಕೆ ನೀಡಿದ್ದಾರೆ. ಈ ಫೋಟೋ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಮೆಲೋನಿ ಕಳೆದ ಸೆಪ್ಟೆಂಬರ್ ನಲ್ಲಿ ಭಾರತದಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು. ಶೃಂಗಸಭೆ ವೇಳೆ ಮೋದಿಯವರ ಜೊತೆ ಇಟಲಿ ಪ್ರಧಾನಿ ನಿಯೋಗದಿಂದ ಮಾತುಕತೆ ನಡೆದಿತ್ತು.

ದುಬೈಗೆ ತೆರಳಿದ್ದ ಮೋದಿಯವರು ಸಿಓಪಿ 28 ಶೃಂಗಸಭೆಯಾಗಿ ಇಂದು ದೆಹಲಿಗೆ ಮರಳಿದ್ದಾರೆ. ದುಬೈ ಭೇಟಿ ಸಂದರ್ಭದಲ್ಲಿ ಮೋದಿಯವರು,

ವಿವಿಧ ರಾಷ್ಟ್ರಗಳ ಮುಖ್ಯಸ್ಥರ ಜೊತೆ ಚರ್ಚೆ ನಡೆಸಿದ್ದಾರೆ.

ಮೋದಿಯವರು ಮೆಲೋನಿ ಅವರಲ್ಲದೆ, ಪ್ರಧಾನಿ ಮೋದಿ ಅವರು ಬ್ರಿಟಿಷ್ ಪ್ರಧಾನಿ ರಿಷಿ ಸುನಕ್, ಬ್ರೆಜಿಲ್ ಪ್ರಧಾನಿ ಲೂಯಿಜ್ ಇನಾಸಿಯೊ ಲುಲಾ ಡಾ ಸಿಲ್ವಾ, ಬ್ರಿಟಿಷ್ ವಿದೇಶಾಂಗ ಸಚಿವ ಡೇವಿಡ್ ಕ್ಯಾಮರೂನ್, ಬ್ರಿಟನ್ ಮಾಜಿ ಪ್ರಧಾನಿ ಟೋನಿ ಬ್ಲೇರ್ ಅವರನ್ನು ಭೇಟಿಯಾದರು.

ಇಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನದ ನಾಲ್ಕು ಅಧಿವೇಶನಗಳನ್ನು ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ಸಮಾವೇಶದಲ್ಲಿ, ಪ್ರಧಾನಿ ಮೋದಿ ಮತ್ತು ಇತರ ಜಾಗತಿಕ ನಾಯಕರು ಒಟ್ಟಿಗೆ ಗ್ರೂಪ್ ಫೋಟೋ ಕೂಡ ತೆಗೆದುಕೊಂಡರು.

ಸಿಓಪಿ 28 ಶೃಂಗಸಭೆಯಲ್ಲಿ ಮಾತನಾಡಿದ್ದ ಪ್ರಧಾನಿ ಮೋದಿ, ಪ್ರತಿಯೊಬ್ಬರೂ ಪರಿಸರದ ಬಗ್ಗೆ ಚಿಂತಿಸಬೇಕು ಎಂದರು. ನಮ್ಮ ಆರೋಗ್ಯದ ಬಗ್ಗೆ ನಾವು ಯೋಚಿಸುವಂತೆಯೇ ನಾವು ಅದರ ಬಗ್ಗೆ ಯೋಚಿಸಬೇಕು. ಇಂಗಾಲದ ಹೊರಸೂಸುವಿಕೆಯನ್ನು ತೀವ್ರವಾಗಿ ಕಡಿಮೆ ಮಾಡಲು ಎಲ್ಲಾ ದೇಶಗಳು ಒಟ್ಟಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಇತರ ದೇಶಗಳಿಗೆ ಹೋಲಿಸಿದರೆ ಭಾರತದ ಹೊರಸೂಸುವಿಕೆ ತುಂಬಾ ಕಡಿಮೆ ಇದೆ. 2030 ರ ವೇಳೆಗೆ ಇಂಗಾಲದ ಹೊರಸೂಸುವಿಕೆಯನ್ನು ಶೇಕಡಾ 45 ರಷ್ಟು ಕಡಿಮೆ ಮಾಡುವುದು ನಮ್ಮ ಗುರಿಯಾಗಿದೆ ಎಂದು ಹೇಳಿದ್ದರು.

ಶ್ರೀ ಮಂಗಳಾದೇವಿ ದೇವಸ್ಥಾನ ರಸ್ತೆ" ನಾಮಕರಣ

ಮಂಗಳೂರು: ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಎ.ಬಿ ಶೆಟ್ಟಿ ವೃತ್ತದಿಂದ ಮಂಕಿ ಸ್ಟ್ಯಾಂಡ್ ಮೂಲಕಥ ಮಂಗಳಾದೇವಿ ದೇವಸ್ಥಾನ ಶಮಿಕಟ್ಟೆಯಾಗಿ ಫಸ್ಟ್ ರೈಲ್ವೆ ಬ್ರಿಡ್ಜ್‌ವರೆಗಿನ ರಸ್ತೆಯನ್ನು "ಶ್ರೀ ಮಂಗಳಾದೇವಿ ದೇವಸ್ಥಾನ ರಸ್ತೆ" ಎಂದು ನಾಮಕರಣ ಮಾಡಲು ಸರಕಾರದ ಅನುಮೋದನೆ ದೊರಕಿದೆ ಮಹಾನಗರಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.11ರಂದು ಜೋಕಟ್ಟೆ ಗ್ರಾಮ ಸಭೆ

ಮಂಗಳೂರು: ಮಂಗಳೂರು ತಾಲೂಕು ಜೋಕಟ್ಟೆ ಗ್ರಾಮ ಪಂಚಾಯತ್ ನ 2023–24ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆ ಹಾಗೂ 15ನೇ ಹಣಕಾಸು ಯೋಜನೆಯ ಸಾಮಾಜಿಕ ಪರಿಶೋಧನಾ ಗ್ರಾಮ ಸಭೆ ಡಿಸೆಂಬರ್ 11ರಂದು ಬೆಳಿಗ್ಗೆ 11 ಗಂಟೆಗೆ ಜೋಕಟ್ಟೆ ಗ್ರಾಮ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾ

ನಾಳೆ ಹುಕ್ಕೇರಿಯಲ್ಲಿ ಎಸ್.ಎಸ್.ಕನ್ವೆನ್ಷನಲ್ ಹಾಲ್ ಉದ್ಘಾಟನೆ

ಹುಕ್ಕೇರಿ: ಪಟ್ಟಣ ಹೊರವಲಯದಲ್ಲಿ ನೂತನವಾಗಿ ನಿರ್ಮಿಸಿದ ಎಸ್.ಎಸ್.ಕನ್ವೆನ್ಷನಲ್ ಹಾಲ್ (ಸಾಂಪ್ರದಾಯಿಕ ಕಲ್ಯಾಣ ಮಂಟಪ ಹಾಗೂ ಸಭಾಭವನ) ಉದ್ಘಾಟನಾ ಸಮಾರಂಭವನ್ನು ಇದೇ ತಿಂಗಳು ಡಿ.4 ರಂದು ಏರ್ಪಡಿಸಲಾಗಿದೆ ಎಂದು ಗಂಗಾಮತಸ್ಥ (ಕೋಳಿ) ಸಮಾಜದ ತಾಲೂಕು ಘಟಕ ಅಧ್ಯಕ್ಷ ಕಿಶೋಕ ಶಿರಗೆ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಕೇಶ್ವರ ರಸ್ತೆಗೆ ಹೊಂದಿಕೊಂಡಂತಿರುವ ವಿಶಾಲವಾದ ಪ್ರದೇಶದಲ್ಲಿ ನಿರ್ಮಿಸಿರುವ ಎಸ್.ಎಸ್. ಕನ್ವೆನ್ಷನಲ್ ಹಾಲ್ ಉದ್ಘಾಟನೆಯನ್ನು ಅದ್ದೂರಿಯಾಗಿ ನೆರವೇರಿಸಲಾಗುವುದು ಎಂದರು. ಈ ನೂತನ ಹಾಲ್ ಉದ್ಘಾಟನೆಯನ್ನು ಉಚಿತವಾಗಿ ಸರ್ವಧರ್ಮದ ಸಾಮೂಹಿಕ ವಿವಾಹ ಸಮಾರಂಭವನ್ನು ಏರ್ಪಡಿಸುವ ಮೂಲಕ ವಿಶಿಷ್ಟ ಹಾಗೂ ವಿಭಿನ್ನವಾಗಿ ನಡೆಸಲು ನಿರ್ಧರಿಸಲಾಗಿದೆ. ಈಗಾಗಲೇ 6 ಜೋಡಿಗಳು ಹೆಸರು ನೊಂದಾಯಿಸಿಕೊಂಡಿದ್ದು ವಧು–ವರರಿಗೆ ವಿವಾಹಕ್ಕೆ ಬೇಕಾದ ವಸ್ತುಗಳನ್ನು ನೀಡಲಾಗುವುದು ಎಂದು ಅವರು ಹೇಳಿದರು. ಅಂದು ಬೆಳಗ್ಗೆ 11 ಕ್ಕೆ ನಡೆಯುವ ಈ ಸಮಾರಂಭದ ಸಾನಿಧ್ಯವನ್ನು ನರಸೀಪುರ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಗೋಣಿಬೀಡು ಸಿದ್ಧಲಿಂಗ ಸ್ವಾಮೀಜಿ, ಹಿರೇಮಠ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ವಿರಕ್ತಮಠ ಶಿವಬಸವ ಸ್ವಾಮೀಜಿ, ಕ್ಯಾರಗುಡ್ ಅಭಿನವ ಮಂಜುನಾಥ ಸ್ವಾಮೀಜಿ, ಸುರಪುರ ಕೇರವಾಡ ಪ್ರಭು ಅಡವಿಸಿದ್ದೇಶ್ವರ ಸ್ವಾಮೀಜಿ ವಹಿಸುವರು. ಸಚಿವ ಸತೀಶ ಜಾರಕಿಹೊಳಿ ಸಭಾಭವನ ಉದ್ಘಾಟಿಸಲಿದ್ದು ಸಚಿವೆ ಲಕ್ಷ್ಮೀ ಹೆಬ್ಬಾಳಕರ ಸಾಮೂಹಿಕ ವಿವಾಹಕ್ಕೆ ಚಾಲನೆ ನೀಡುವರು. ಶಾಸಕ ನಿಖಿಲ್ ಕತ್ತಿ ಅಧ್ಯಕ್ಷತೆ ವಹಿಸುವರು. ಪಬ್ಲಿಕ್ ಟಿವಿ ವ್ಯವಸ್ಥಾಪಕ ನಿರ್ದೇಶಕ ಎಚ್.ಆರ್.ರಂಗನಾಥ, ಉದ್ಯಮಿ ಸಂಜಯ ಘೋಡಾವತ್, ಮಾಜಿ ಸಂಸದ ರಮೇಶ ಕತ್ತಿ, ಮಾಜಿ ಸಚಿವ ಎ.ಬಿ.ಪಾಟೀಲ ಮತ್ತಿತರರು ಉಪಸ್ಥಿತರಿರುವರು ಎಂದು ಅವರು ತಿಳಿಸಿದರು. ಸುಸಜ್ಜಿತ ವಿಶಾಲವಾದ ಪ್ರದೇಶದಲ್ಲಿ ತಲೆ ಎತ್ತಿ ನಿಂತಿರುವ ಈ ಹಾಲ್‌ನಲ್ಲಿ ಏಕಕಾಲಕ್ಕೆ ಸುಮಾರು 1200 ಜನ ಕುಳಿತುಕೊಳ್ಳುವ ಅವಕಾಶವಿದೆ. ಪುರುಷ–ಮಹಿಳೆಯರಿಗೆ ಪ್ರತ್ಯೇಕ ಕೊಠಡಿಗಳಿವೆ. ಅಡುಗೆ ಕೋಣೆ, ಶೌಚಾಲಯ, ಡ್ರೇಸಿಂಗ್ ಕೊಠಡಿ, ವಾಹನಗಳ ಪಾರ್ಕಿಂಗ್‌ಗೆ ಅಗತ್ಯ ಸ್ಥಳಾವಕಾಶವಿದೆ. ಸಭೆ–ಸಮಾರಂಭ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಕಾರ್ಯಕ್ರಮಗಳನ್ನು ಆಯೋಜಿಸಲು ಈ ಹಾಲ್ ಹೇಳಿ ಮಾಡಿಸಿದ ತಾಣವಾಗಿದೆ ಎಂದು ಅವರು ಹೇಳಿದರು.

ರೀಡ್ಸ್ ಸಂಸ್ಥೆ ಅಧ್ಯಕ್ಷ ಅಶೋಕ ಪಾಟೀಲ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ತಮ್ಮದೇಯಾದ ಅನುಪಮ, ಅಗಾಧ ಸೇವೆ ಸಲ್ಲಿಸುತ್ತಿರುವ ಹಿರಿಯ ಪತ್ರಕರ್ತ ದಿಲೀಪಕುಮಾರ ಕುರಂದವಾಡೆಯವರ ಪರಿಶ್ರಮದ ಮತ್ತು ಕನಸಿನ ಕಲ್ಯಾಣ ಮಂಟಪವನ್ನು ವಾಸ್ತು–ಶಾಸ್ತ್ರೊಥಕ್ತವಾದ ನೆಲೆಗಟ್ಟಿನಲ್ಲಿ ನಿರ್ಮಿಸಲಾಗಿದೆ.

ತಮ್ಮ ತಂದೆ–ತಾಯಿ ಮತ್ತು ಪೂರ್ವಜರ ಸ್ಮರಣಾರ್ಥ ಈ ಭವ್ಯ ಹಾಲ್ ನಿರ್ಮಿಸಿದ್ದು ಈ ಭಾಗದ ಗ್ರಾಮೀಣ ಬಡವರಿಗೆ ವರದಾನವಾಗಲಿದೆ. ದಿಲೀಪ ಕುರಂದವಾಡೆಯವರು 49 ವರ್ಷ ಪೂರೈಸಿ 50ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸವಿನೆಪಿಗೋಸ್ಕರ ಸಾಮೂಹಿಕ ವಿವಾಹವನ್ನೂ ಏರ್ಪಡಿಸಲಾಗಿದೆ ಎಂದರು.

ಉತ್ತರ ಪ್ರದೇಶ: ಬಡವರ ಮತಾಂತರಕ್ಕೆ ಯತ್ನ

42 ಮಂದಿ ವಿರುದ್ಧ ಪ್ರಕರಣ, 9 ಮಂದಿ ಬಂಧನ

ಲಖನೌ: ಬಡವರ ಮತಾಂತರಕ್ಕೆ ಯತ್ನಿಸಿದ ಆರೋಪದ ಮೇರೆಗೆ ಉತ್ತರ ಪ್ರದೇಶದಲ್ಲಿ 42 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, 9 ಮಂದಿಯನ್ನು ಬಂಧಿಸಲಾಗಿದೆ.

ಉತ್ತರ ಪ್ರದೇಶ ಪೊಲೀಸರು ಸೋನ್‌ಭದ್ರಾ ಜಿಲ್ಲೆಯಲ್ಲಿ ಬಡವರು ಮತ್ತು ಬುಡಕಟ್ಟು ಜನರನ್ನು ವಂಚನೆಯ ಮೂಲಕ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುವಂತೆ ಆಮಿಷ ಒಡ್ಡಿದ ಆರೋಪದ ಮೇಲೆ 42 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದು, 42 ಮಂದಿಯ ಪೈಕಿ ಒಂಬತ್ತು ಮಂದಿಯನ್ನು ಬಂಧಿಸಿದ್ದಾರೆ. ಬಂಧಿತ ಆರೋಪಿಗಳಿಂದ ಅಪಾರ ಪ್ರಮಾಣದ ಧಾರ್ಮಿಕ ಪುಸ್ತಕಗಳು, ಪ್ರಚಾರ ಸಾಮಗ್ರಿಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಜಿಲ್ಲೆಯ ಚೋಪಾನ್ ಪೊಲೀಸ್ ಠಾಣಾ ವ್ಯಾಪ್ತಿಯ ಮಲ್ಹಿಯಾ ತೋಲಾ ನಿವಾಸಿ ನರಸಿಂಗ್ ಎಂಬುವರು ಬುಡಕಟ್ಟು ಜನರು ಮತ್ತು ಬಡವರನ್ನು ವಂಚನೆಯ ಮೂಲಕ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳಿಸುವಂತೆ ಆಮಿಷ ಒಡ್ಡುತ್ತಿದ್ದಾರೆ ಎಂದು ದೂರು ದಾಖಲಿಸಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕಲು ಸಿಂಗ್ ಹೇಳಿದ್ದಾರೆ.

ದೂರಿನ ಆಧಾರದ ಮೇಲೆ, ಗುರುವಾರ ಉತ್ತರ ಪ್ರದೇಶ ಕಾನೂನುಬಾಹಿರ ಮತಾಂತರ ನಿಷೇಧ ಕಾಯ್ದೆಯಡಿ 42 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ನಂತರ ಒಂಬತ್ತು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳಲ್ಲಿ ತಮಿಳುನಾಡಿನ ಚೆನ್ನೈನ ಜೈಪ್ರಭು, ಉತ್ತರ ಪ್ರದೇಶದ ರಾಬರ್ಟ್ಸ್‌ಗಂಜ್‌ನ ಅಜಯ್ ಕುಮಾರ್ ಮತ್ತು ಆಂಧ್ರಪ್ರದೇಶದ ವಿಜಯವಾಡದ ಚೆಕ್ಕಾ ಇಮ್ಮಾನುಯೆಲ್ ಸೇರಿದ್ದಾರೆ.

ಉಳಿದ ಬಂಧಿತ ಆರೋಪಿಗಳನ್ನು ರಾಜೇಂದ್ರ ಕೋಲ್, ಛೋಟು ಅಲಿಯಾಸ್ ರಂಜನ್, ಪರಮಾನಂದ್, ಸೋಹನ್, ಪ್ರೇಮ್ ನಾಥ್ ಪ್ರಜಾಪತಿ ಮತ್ತು ರಾಮ್ ಪ್ರತಾಪ್ ಎಂದು ಗುರುತಿಸಲಾಗಿದೆ.

ಟಾಟಾ ಉಪ್ಪು: ಸಾಟಿಯಿಲ್ಲದ ಬದ್ಧತೆ ಮತ್ತು ಕಾಳಜಿ

ಹುಬ್ಬಳ್ಳಿ: ನಾಲ್ಕು ದಶಕಗಳಿಗೂ ಹೆಚ್ಚು ಸಮಯದಿಂದ ಟಾಟಾ ಉಪ್ಪು ಭಾರತೀಯ ಮನೆಗಳಲ್ಲಿ ನಂಬಿಕೆ ಮತ್ತು ಪರಿಶುದ್ಧತೆಯ ಸಂಕೇತವಾಗಿ ಬೆಳೆದಿದೆ ಮತ್ತು ಈಗ, ಇನ್ನೂ ಹೆಚ್ಚಿನ ದೃಢತೆಯೊಂದಿಗೆ, ತನ್ನ ಗೌರವಯುತ ಗ್ರಾಹಕರ ಯೋಗಕ್ಷೇಮದ ಸಲುವಾಗಿ ತನ್ನ ಗಾಢ ಸಮರ್ಪಣಾ ಭಾವವನ್ನು ಪುನಃಸ್ಥಾಪಿಸುತ್ತಿದೆ. ಟಾಟಾ ಉಪ್ಪು ಪ್ರತಿಯೊಬ್ಬ ವ್ಯಕ್ತಿಯ ಯೋಗಕ್ಷೇಮಕ್ಕಾಗಿ ಉತ್ತಮ ಗುಣಮಟ್ಟದ, ಅಯೋಡಿಕರಿಸಿದ ಉಪ್ಪನ್ನು ತಲುಪಿಸುವುದಕ್ಕೆ ಬದ್ಧವಾಗಿದೆ.

ಕೆಲವು ಪ್ರದೇಶದಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ಪರಿಷ್ಕರಣೆ ಮತ್ತು ಗುಣಮಟ್ಟಕ್ಕೆ ಹೆಸರಾಗಿರುವ ಟಾಟಾ ಉಪ್ಪು, ಪ್ರಯೋಗಾಲಯ ಪರೀಕ್ಷೆಗಳು ಮೌಲ್ಯೀಕರಿಸಿದಂತೆ ರಾಷ್ಟ್ರವ್ಯಾಪಿ ಇರುವ 100 ಉಪ್ಪುಗಳಲ್ಲಿಯೇ ಹೆಚ್ಚು ಸಂಸ್ಕರಿಸಿದ ಸಂಸ್ಥೆಯಾಗಿ ಹೊರಹೊಮ್ಮಿದೆ. ಉದ್ಯಮದಲ್ಲಿ ನಾಯಕನಾಗಿ ರೂಪುಗೊಂಡಿರುವ ಟಾಟಾ ಉಪ್ಪು ರಾಷ್ಟ್ರದ ಯೋಗಕ್ಷೇಮದ ಕುರಿತಾದ ತನ್ನ ಬದ್ಧತೆಯ ಬಗ್ಗೆ ಹೆಮ್ಮೆಪಡುತ್ತದೆ.

ಟಾಟಾ ಗ್ರಾಹಕ ಉತ್ಪನ್ನಗಳು, ಪ್ಯಾಕೇಜ್ಡ್ ಫುಡ್ಸ್–ಇಂಡಿಯಾದ ಅಧ್ಯಕ್ಷರಾಗಿರುವ ದೀಪಿಕಾ ಭಾನ್ ಈ ಕುರಿತು ಮಾತನಾಡುತ್ತಾ, 'ಭಾರತದಲ್ಲಿನ ಅಯೋಡೀಕರಣ ಪ್ರಯಾಣದ ಪ್ರವರ್ತಕರಾಗಿ, ಅಯೋಡಿನ್ ಕೊರತೆಯ ವಿರುದ್ಧ ರಾಷ್ಟ್ರದ ಹೋರಾಟದಲ್ಲಿ ಟಾಟಾ ಉಪ್ಪು ನಿರ್ಣಾಯಕ ಪಾತ್ರವನ್ನು ವಹಿಸಿದೆ. ಸಂಸ್ಥೆಯು ಭಾರತದಲ್ಲಿ ಅಯೋಡೀಕರಣ ಆಂದೋಲನದ ಮುಂಚೂಣಿಯಲ್ಲಿದೆ, ಅಯೋಡಿನ್–ಸಂಬಂಧಿತ ಕೊರತೆಗಳು, ಗಾಯಿಟರ್, ಕ್ರೆಟಿನಿಸಂ ಮತ್ತು ಇತರ ಸಂಬಂಧಿತ ಸಮಸ್ಯೆಗಳನ್ನು ನಿರ್ಮೂಲನೆ ಮಾಡಲು ದಣಿವಿನ ಅರಿವಿಲ್ಲದೆ ಕೆಲಸ ಮಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ, ಭಾರತದಲ್ಲಿ ಉಪ್ಪಿನ ಅಯೋಡೀಕರಣದ ಬಗ್ಗೆ ಹೆಚ್ಚು ಚರ್ಚೆಗಳು ನಡೆಯುತ್ತಿವೆ.

ಟಾಟಾ ಉಪ್ಪು ಮಾನಸಿಕ ಬೆಳವಣಿಗೆಗೆ ವಿಶೇಷವಾಗಿ ಮಕ್ಕಳಲ್ಲಿ ಅಯೋಡಿನ್‌ನ ಮಹತ್ವವನ್ನು ಸಾರಲು ಈ ಅವಕಾಶವನ್ನು ಬಳಸಿಕೊಳ್ಳಲು ಬಯಸುತ್ತದೆ. ಅಯೋಡಿನ್ ಕೊರತೆಯು ಐಕ್ಯೂ ಪಾಯಿಂಟ್‌ಗಳಲ್ಲಿನ ಇಳಿಕೆಗೆ ಕಾರಣವಾಗಬಹುದು ಮತ್ತು ಉಪ್ಪಿನಲ್ಲಿರುವ ನೈಸರ್ಗಿಕ ಅಯೋಡಿನ್ ಪ್ರಮಾಣವು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಸೂಚಿಸಿದ ಸರಿಯಾದ ಪ್ರಮಾಣ 15–30 ಪಿಪಿಎಂಗಿಂತ ಆಗಾಗ್ಗೆ ಕಡಿಮೆ ಬೀಳುತ್ತದೆ ಎಂಬುದು ಈಗಾಗಲೇ ತಿಳಿಯಲಾಗಿದೆ. ಟಾಟಾ ಉಪ್ಪು ಸರಿಯಾದ ಪ್ರಮಾಣದ ಅಯೋಡಿನ್ ಅನ್ನು ಖಾತರಿಪಡಿಸುತ್ತದೆ,

ಇದು ಮಕ್ಕಳಲ್ಲಿ ಮಾನಸಿಕ ಬೆಳವಣಿಗೆಗೆ ನಿರ್ಣಾಯಕ ಸೂಕ್ಷ್ಮ ಪೋಷಕಾಂಶವಾಗಿದೆ. ಲಕ್ಷಾಂತರ ಕುಟುಂಬಗಳಿಗೆ ವಿಶ್ವಾಸಾರ್ಹ ಅಯೋಡಿನ್ ಸಂಪನ್ಮೂಲ ಒದಗಿಸುವ ಮೂಲಕ ಟಾಟಾ ಬ್ರ್ಯಾಂಡ್ ದೇಶದಲ್ಲಿನ ಆರೋಗ್ಯ ಕುರಿತ ಕಾರ್ಯಸೂಚಿಯನ್ನು ಲವಲವಿಕೆಯಿಂದ ಮುನ್ನಡೆಸುತ್ತಿದೆ. ಟಾಟಾ ಉಪ್ಪು ಪರಿಷ್ಕರಣೆ ಮತ್ತು ಗುಣಮಟ್ಟದ ಕುರಿತ ತನ್ನ ಬದ್ಧತೆಯಲ್ಲಿ ಸ್ಥಿರವಾಗಿದೆ ಮತ್ತು ಅನ್ವಯವಾಗುವ ನಿಯಮಗಳ ವ್ಯಾಪ್ತಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಾವು ನಮ್ಮ ಎಲ್ಲಾ ಗ್ರಾಹಕರಿಗೆ ಈ ಮೂಲಕ ಭರವಸೆ ನೀಡಲು ಬಯಸುತ್ತೇವೆ' ಎನ್ನುತ್ತಾರೆ.

ಕಾಲದ ಪರೀಕ್ಷೆಯಲ್ಲಿ ಹಾದು ಬಂದಿರುವ ಮತ್ತು ನಂಬಿಕೆ, ಶುದ್ಧತೆ ಮತ್ತು ಗುಣಮಟ್ಟದ ಭರವಸೆಯನ್ನು ನಿರಂತರವಾಗಿ ಒದಗಿಸುತ್ತಿರುವ ತಮ್ಮ ಬ್ರಾಂಡ್ ಅನ್ನು ಆರಿಸಿಕೊಳ್ಳುವ ಮೂಲಕ ತಮ್ಮ ಯೋಗಕ್ಷೇಮದ ಕುರಿತು ಆದ್ಯತೆ ನೀಡಲು ಟಾಟಾ ಉಪ್ಪು ತನ್ನ ಗ್ರಾಹಕರನ್ನು ಉತ್ತೇಜಿಸುತ್ತದೆ.

ಅರ್ಜಿ ಆಹ್ವಾನ

ಧಾರವಾಡ: ಹುಬ್ಬಳ್ಳಿಯ ನೂತನ ನ್ಯಾಯಾಲಯದ ಸಂಕೀರ್ಣದಲ್ಲಿ ಉಪಹಾರ ಗೃಹವನ್ನು ಬಾಡಿಗೆ ಆಧಾರದ ಮೇಲೆ ಲೈಸನ್ಸ್ ಪಡೆದು ನಡೆಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಡಿಸೆಂಬರ್ 30 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಧಾರವಾಡದ ಅಂತರ್ಜಾಲದಲ್ಲಿ **http://dharwad.dcorts.gov.in** ಹಾಗೂ ನ್ಯಾಯಾಲಯದ ಕಛೇರಿಯಲ್ಲಿ ಮಾಹಿತಿ ಪಡೆಯಬಹುದೆಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

ಧಾರವಾಡ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1 ಅಲೆಮಾರಿ, ಅರೆಅಲೆಮಾರಿ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಮೆಟ್ರಿಕ ನಂತರದ ವಿದ್ಯಾರ್ಥಿವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ(ಊಟ ಮತ್ತು ವಸತಿ ಸಹಾಯ ಯೋಜನೆ)ಯ ಸೌಲಭ್ಯಕ್ಕಾಗಿ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆನ್ ಲೈನ್ ಮೂಲಕ https://SAP.postmatric.karnataka.gov.in ವೆಬ್ ಸೈಟ್ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ, ಅರ್ಜಿ ಸಲ್ಲಿಸಲು ಜನವರಿ 10, 2024 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ ; 0836–2447961 ಗೆ ಸಂಪರ್ಕಿಸಬಹುದೆಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಯೋಜನೆಗಳಿಗಾಗಿ ನಿಗಮ ಮಂಡಳಿಗಳಿಂದ ಅರ್ಜಿ ಆಹ್ವಾನ

ಧಾರವಾಡ: ಡಾ.ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಅನುಷ್ಠಾನ ಮಾಡುತ್ತಿರುವ ಸ್ವಯಂ ಉದ್ಯೋಗ ಯೋಜನೆ (ನೇರಸಾಲ), ಉದ್ಯಮ ಶೀಲತಾ ಯೋಜನೆ, ಸ್ವಾವಲಂಬಿ ಸಾರಥಿಯೋಜನೆ, ಮೈಕ್ರೋಕ್ರೆಡಿಟ್(ಪ್ರೇರಣಾ) ಯೋಜನೆ, ಭೂಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆಗಳಿಗೆ ಅರ್ಹರಿಂದ 2023–24ನೇ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಅರ್ಹರು ಸೇವಾಸಿಂಧು ಪೋರ್ಟಲ್ ಮೂಲಕ http://sevasindhu.karantaka.gov.in ರ ಕರ್ನಾಟಕ–ಒನ್, ಗ್ರಾಮ್–ಒನ್, ಹುಬ್ಬಳ್ಳಿ, ಧಾರವಾಡ– ಒನ್ಕೇಂದ್ರಗಳಲ್ಲಿ ಡಿಸೆಂಬರ್ 15, 2023ರೊಳಗೆ ಅರ್ಜಿಸಲ್ಲಿಸಬಹುದು ಎಂದು ಡಾ.ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.25 ರಿಂದ 27 ರವೆಗೆ ಜಿಲ್ಲಾ ಮಟ್ಟದ ಫಲ–ಪುಷ್ಪ ಪ್ರದರ್ಶನ ಆಯೋಜನೆ

ಧಾರವಾಡ: ಜಿಲ್ಲಾ ಮಟ್ಟದ 2023–24ನೇ ಸಾಲಿನ ಫಲ–ಪುಷ್ಪ ಪ್ರದರ್ಶನವನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆ, ಕೃಷಿ ಇಲಾಖೆ ಮತ್ತು ಫಲ–ಪುಷ್ಪ ಪ್ರದರ್ಶನ ಸಮಿತಿ, ಜಿಲ್ಲಾ ಹಾಪ್ ಕಾಮ್ಸ್, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಧಾರವಾಡ ಇವರ ಸಹಯೋಗದೊಂದಿಗೆ ಡಿಸೆಂಬರ್ 25. 2023 ರಿಂದ 27. 2023 ರವರೆಗೆ ಮೂರು ದಿನಗಳ ಕಾಲ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆ ಆವರಣದಲ್ಲಿ ಆಯೋಜಿಸಲಾಗಿದೆ.

ಸದರಿ ಫಲ–ಪುಷ್ಪ ಪ್ರದರ್ಶನದಲ್ಲಿ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಸಂಘ ಸಂಸ್ಥೆಗಳು, ರೈತರು ಮತ್ತು ಸಾರ್ವಜನಿಕರಿಗೆ ತೋಟಗಾರಿಕೆ ಬೆಳೆಗಳು, ಹೂಗಳು ಮತ್ತು ಅಲಂಕಾರಿಕ ಗಿಡಗಳ ಪ್ರದರ್ಶನದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ದೂರವಾಣಿ ಸಂಖ್ಯೆ: 0836–2957801 ರಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ಧಾರವಾಡ ಇವರನ್ನು ಸಂಪರ್ಕಿಸಬಹುದೆಂದು ತೋಟಗಾರಿಕೆ ಇಲಾಖೆ ಪ್ರಕಟಣೆ ತಿಳಿಸಿದೆ.

ನಕಲಿ ಆಯುರ್ವೇದ ಸಿರಪ್ ಸೇವಿಸಿ ಐವರು ಸಾವು

ಅಹಮದಾಬಾದ್: ನಕಲಿ ಆಯುರ್ವೇದ ಸಿರಪ್ ಸೇವಿಸಿ ಐವರು ಸಾವನ್ನಪ್ಪಿದ್ದು, ಇನ್ನೊಬ್ಬರ ಸ್ಥಿತಿ ಚಿಂತಾಜನಕವಾಗಿರುವ ಘಟನೆ ಗುಜರಾತ್‌ನ ಖೇಡಾ ಜಿಲ್ಲೆಯ ಮೂರು ಗ್ರಾಮಗಳಲ್ಲಿ ನಡೆದಿದೆ.

ಜಿಲ್ಲೆಯ 3 ಗ್ರಾಮಗಳ ದಿನಸಿ ಅಂಗಡಿಗಳಲ್ಲಿ ಕಲ್ಮೇಘಸವ್– ಅಸವ ಅರಿಷ್ಟ ಎನ್ನುವ ಆಯುರ್ವೇದಿಕ್ ಸಿರಪ್ ಅನ್ನು ಮಾರಾಟ ಮಾಡಲಾಗುತ್ತಿದೆ. ಈ ಸಿರಪ್ ಖರೀದಿ ಮಾಡಿರುವ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿನ ಒಟ್ಟು 5 ಮಂದಿ ಸಾವನ್ನಪ್ಪಿದ್ದಾರೆ. ಇನ್ನೊಬ್ಬರು ಸ್ಥಿತಿ ಚಿಂತಾಜನಕವಾಗಿದೆ. ಬಿಲೋದರ ಗ್ರಾಮದಲ್ಲೇ ಮೂವರು ಮೃತಪಟ್ಟಿದ್ದಾರೆ. ಉಳಿದ ಇಬ್ಬರು ಬೇರೆ ಗ್ರಾಮದವರೆಂದು ಅಲ್ಲಿನ ಪೊಲೀಸರು ಮಾಹಿತಿ ನೀಡಿದ್ದಾರೆ.

ಸರಳ ಹೆರಿಗೆ ಮೂಲಕ ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ ತಾಯಿ

ಬಾಗಲಕೋಟೆ: ತಾಯಿಯೊಬ್ಬಳು ಮೂರು ಗಂಡು ಶಿಶುಗಳಿಗೆ ಜನ್ಮ ನೀಡಿದ ಅಪರೂಪದ ಘಟನೆ ಬಾಗಲಕೋಟೆ ಜಿಲ್ಲೆ ಇಳಕಲ್ಲ ಎಸ್.ಎಸ್.ಕಡಪಟ್ಟಿ ಖಾಸಗಿ ಆಸ್ಪತ್ರೆಯಲ್ಲಿ ನಡೆದಿದೆ.

ರಾಯಚೂರು ಮೂಲದ ಚನ್ನಬಸವ ಬೊಮ್ಮನಾಳ ದಂಪತಿಗೆ ತ್ರಿವಳಿ ಮಕ್ಕಳಾಗಿದ್ದು ಕುಟುಂಬಸ್ಥರಲ್

ಅಗ್ನಿವೀರರಿಗೆ 4 ವರ್ಷಗಳ ನಂತರೂ ಸೇನೆಯಲ್ಲಿ ಸೇವೆ ಸಲ್ಲಿಸಲು ಅವಕಾಶಗಳಿವೆ: ಏರಮ್ಯಾನ್ ಟ್ರೈನಿಂಗ್ ಕಮಾಂಡರ್ ಆರ್. ರಾಧೀಶ್

ಬೆಳಗಾವಿ: ಅತ್ಯುತ್ತಮ ಸೇವೆ ಸಲ್ಲಿಸುವ 25% ಸಿಬ್ಬಂದಿಗೆ, ಇದೇ ಏರ್ ಫೋರ್ಸ್‌ನಲ್ಲಿ ಮುಂದುವರೆಯಲು ಅವಕಾಶವಿದೆ. ಅಗ್ನಿವೀರರಿಗೆ 4 ವರ್ಷಗಳ ನಂತರೂ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಲು ಉತ್ತಮ ಅವಕಾಶಗಳಿವೆ ಎಂದು ಬೆಳಗಾವಿ ಏರಮ್ಯಾನ್ ಟ್ರೈನಿಂಗ್ ಕಮಾಂಡರ್ ಆರ್. ರಾಧೀಶ್ ಹೇಳಿದರು.

ನಗರದ ಸಾಂಬ್ರಾ ಬಳಿರುವ ಏರಮನ್ ಟ್ರೆನಿಂಗ್ ಸ್ಕೂಲ್ ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವಿಷಯ ತಿಳಿಸಿದ ಅವರು, ಬೆಳಗಾವಿಯಲ್ಲಿ ಅಗ್ನಿ ವೀರ ಟ್ರೈನಿಂಗ್ ಮುಗಿಸಿ 2280 ಜನ ವಾಯುಪಡೆಗೆ ಸೇರ್ಪಡೆಗೊಂಡಿದ್ದಾರೆ. ಇದರಲ್ಲಿ 153 ಮಹಿಳೆಯರು ಮತ್ತು ಒಟ್ಟು 2280 ಪುರುಷರಿದ್ದಾರೆ. ಇಂದು 22 ವಾರಗಳ ಯುದ್ಧ ಕೌಶಲ್ಯ ತರಬೇತಿಯನ್ನು ಕಲಿತುಕೊಂಡು ಜಾಗತಿಕ ರಕ್ಷಣಾ ವಲಯದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು 2280 ಜನ ವಾಯುಪಡೆಗೆ ಸೇರ್ಪಡೆಗೊಂಡದು ಸಂತಸವಾಗಿದೆ ಎಂದರು.

ಅಗ್ನಿವೀರರಾದ ಪ್ರತಿಯೊಬ್ಬರಿಗೆ ನಾಲ್ಕು ವರ್ಷದ ಅವಧಿಗೆ ಮಾತ್ರ ವರ್ಷಕ್ಕೆ, ತಿಂಗಳಿಗೆ 30 ಸಾವಿರ ರೂಪಾಯಿಗಳಿಂದ 40 ಸಾವಿರವರೆಗೆ ಸಂಬಳ ಸಿಗಲಿದೆ. ಇದರಲ್ಲಿ ಉಚಿತವಾಗಿ ವೈದ್ಯಕೀಯ ವಿಮೆ ದೊರೆಯುತ್ತದೆ. ನಾಲ್ಕು ವರ್ಷ ಸೇವೆ ಸಲ್ಲಿಸಿ ಬಿಡುಗಡೆ ಹೊಂದುವ ಅಗ್ನಿವೀರರಿಗೆ ಸುಮಾರು 11.70 ಲಕ್ಷ ಸೇವಾ ನಿಧಿಯಾಗಿ ಕೊಡಲಾಗುತ್ತದೆ.ಉತ್ತಮವಾಗಿ ಕೆಲಸ ಮಾಡಿದ ಅಗ್ನಿವೀರರ ವಿವಿಧಡ ಕೆಲಸ ಸಿಗುತ್ತೇದೆ ಎಂದರು.

ಅಗ್ನಿವೀರ್ ವಾಯುನ ನಾಲ್ಕು ವರ್ಷ ಸೇವೆ ಮುಕ್ತಾಯದ ಬಳಿಕ, ವಾಯು ಸೇನೆಯಲ್ಲಿ ಮತ್ತೋಂದು ಅವಕಾಶ ಕಲ್ಪಿಸಲಾಗಿದೆ. ನಾಲ್ಕು ವರ್ಷಗಳಲ್ಲಿ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುವ 25% ಸಿಬ್ಬಂದಿಗೆ, ಇದೇ ಏರ್ ಫೋರ್ಸ್‌ನಲ್ಲಿ ಮು ಂದುವರೆಯಲು ಅವಕಾಶವಿದೆ ಎಂದು ಹೇಳಿದರು.

ಅಗ್ನಿಪಥ್ ಯೋಜನೆಗೆ ಅರ್ಹರಾಗಲು ನಿಮ್ಮ ವಯಸ್ಸು 17 ವರ್ಷದಿಂದ 21 ವರ್ಷಗಳ ನಡುವೆ ಇರಬೇಕು.

ಈ ನೇಮಕಾತಿಯಲ್ಲಿ ಸೇನೆಯಂತೆಯೇ ಅದೇ ಪ್ರಕ್ರಿಯೆಯಿಂದ ಆಯ್ಕೆ ಮಾಡಲಾಗುತ್ತದೆ. ಅಂದರೆ ಸೇನೆ ನಿಗದಿಪಡಿಸಿದ ನಿಯಮಗಳ ಪ್ರಕಾರವೇ ನೇಮಕಾತಿ ನಡೆಯಲಿದೆ. ಇದರಲ್ಲಿ ನೇಮಕಾತಿಯ ನಂತರ ತರಬೇತಿ ಅವಧಿ ಸೇರಿದಂತೆ ಒಟ್ಟು 4 ವರ್ಷಗಳ ಕಾಲ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಗುತ್ತದೆ ಎಂದರು.

ವಿಪಕ್ಷ ನಾಯಕ ನಾನೇ: ಶಾಸಕ ಯತ್ನಾಳ

ವಿಜಯಪುರ: ಬಸನಗೌಡ ಪಾಟೀಲ್ ಯತ್ನಾಳ್ ಹೈಕಮಾಂಡ್ ನಿಂದ ವಿಪಕ್ಷ ನಾಯಕ ನೇಮಕವಾದ್ರೂ ವಿಪಕ್ಷ ನಾಯಕ ನಾನೇ ಎಂದು ಹೇಳಿದ್ದಾರೆ. ವಿಜಯಪುರದ ಆನಂದ ನಗರದಲ್ಲಿ ನಿನ್ನೆ ರಾತ್ರಿ ನಡೆದ ದಾನಮ್ಮದೇವಿ ಜಾತ್ರೆಯಲ್ಲಿ ಯತ್ನಾಳ್ ಭಾಷಣ ಮಾಡುವ ವೇಳೆ ಈ ಮಾತನ್ನು ಆಡಿದ್ದಾರೆ.

ಈಗ ನಾನೇ ವಿಪಕ್ಷ ನಾಯಕ. ಬಿಜೆಪಿಯಲ್ಲಿ ವಿಪಕ್ಷ ನಾಯಕ ಸ್ಥಾನ ಸೇಲ್ ಆಗಿದ್ಯಾ!?. ಯಾರರ ಏನರ ಕೊಟ್ಟು ತಗೊಂಡು ಮಾಡಿದ್ರೆ ನಾವು ಒಪ್ಪುತ್ತೇವೆ ಎಂದು ಹೇಳಿದ್ದಾರೆ. ಸೋಮವಾರದಿಂದ ನಮ್ಮ ದಂಗಲ್ ಶುರು ಆಗುತ್ತದೆ.

ಯಾರು ನಿಜವಾದ ವಿಪಕ್ಷ ನಾಯಕ ಅಂತ ಫಿಕ್ಸ್ ಮಾಡ್ತೀವಿ. ಕರ್ನಾಟಕದಲ್ಲಿ ಯಾರು ವಿಪಕ್ಷ ನಾಯಕ ಅಂತ ಸೋಮವಾರ ವಿಧಾನಸಭಾದಲ್ಲಿ ಪ್ರಾರಂಭ ಆಗುತ್ತೆ.

ಜನರು ವಿಪಕ್ಷ ನಾಯಕ ಅಂದ್ರೆ ಸಾಕು. ಯಾರಾದರೂ ಏನರ ಕೊಟ್ಟು ತಗೊಂಡು ಮಾಡಿದ್ರೆ ನಾವು ಒಪ್ಪುತ್ತೇವೆ ಏನು!?. ಈಗ ನಾನೇ ವಿಪಕ್ಷ ನಾಯಕನಾಗಿ ಕೆಲ್ಸ ಮಾಡ್ತಿದ್ದೇನೆ. ಎಲ್ಲದಕ್ಕೂ ಠಕ್ಕರ್ ನನ್ನದೇ ಎಂದು ಯತ್ನಾಳ್ ಹೇಳಿದ್ದಾರೆ.

ಗೋವಾದಿಂದ ಬೆಳಗಾವಿಗೆ ಅಕ್ರಮವಾಗಿ ಸಾಗಿಸುತ್ತಿದ್ದ ಲಕ್ಷಾಂತರ ರೂ.ಮದ್ಯ ವಶ

ಬೆಳಗಾವಿ: ಗೋವಾದಿಂದ ಬೆಳಗಾವಿಗೆ ಸಾಗಿಸುತ್ತಿದ್ದ ಅಕ್ರಮ ಮದ್ಯವನ್ನು ಬೆಳಗಾವಿ ಅಬಕಾರಿ ಪೊಲೀಸರು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಸುಮಾರು 5 ಲಕ್ಷ ರೂ. ಮೌಲ್ಯ ಅಕ್ರಮ ಮದ್ಯವನ್ನು ಬೆಳಗಾವಿಯ ಅಬಕಾರಿ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದು ಈ ಸಂಬಂಧ ನಾಗೇಶ ನಾರಾಯಣ ಪಾಟೀಲ್(34) ಹಾಗೂ ಶಿವಾಜಿ ಗಲ್ಲಿ ಬಹದ್ದೂರವಾಡಿ ಸಾಹಿಲ್ ಲಕ್ಷ್ಮಣ ಪಾಟೀಲ (19) ಎಂಬವನನ್ನು ಬಂಧಿಸಿದ್ದಾರೆ.

ಗೋವಾದಿಂದ ಬೆಳಗಾವಿಗೆ ತರುತ್ತಿದ್ದ ವಾಹನ ಮೇಲೆ ಅಬಕಾರಿ ಪೊಲೀಸರು ತಾಲೂಕಿನ ಬಿಜಗರ್ಣಿ ಗ್ರಾಮದಿಂದ ಕವಳೆವಾಡಿ ಗ್ರಾಮಕ್ಕೆ ಹೋಗುವ ರಸ್ತೆಯ ಚೆಕ್ ಪೋಸ್ಟ್ ನಲ್ಲಿ ದಾಳಿ ನಡೆಸಿದಾಗ ಅದರಲ್ಲಿ 5 ಲಕ್ಷ ರೂ. ಮೌಲ್ಯ ಅಕ್ರಮ ಮದ್ಯ ಇರುವುದನ್ನು ಪತ್ತೆ ಹಚ್ಚಿ ಒಟ್ಟು ಎಂಟೂವರೆ ಲಕ್ಷ ಮೌಲ್ಯದ ಮದ್ಯ ಹಾಗೂ ವಾಹನವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ. ವೈ.ಮಂಜುನಾಥ್ ಮಾರ್ಗದರ್ಶನದಲ್ಲಿ ಸಹಾಯಕ ಆಯುಕ್ತ ಫಿರೋಜ್ ಖಾನ್ ಕಿಲ್ಲೇದಾರ, ವನಜಾಕ್ಷಿ ಎಂ.ಜಿಲ್ಲಾ ಪ್ರೊಡ್ಯೂಸರ್ ಶುಕ್ಲಾ ಜಿಲ್ಲಾಧಿಕಾರಿ ವಿಜಯಕುಮಾರ ಹಿರೇಮಠ ಅಬಕಾರಿ ಅಧೀಕ್ಷಕ ರವಿ ಯಮುರಗೋಡ ಅವರ ನೇತೃತ್ವದಲ್ಲಿ ಮಂಜುನಾಥ ಗಲಗಲಿ ಅಬಕಾರಿ ನಿರೀಕ್ಷಕ ಸುನೀಲ್ ಪಾಟೀಲ್, ಮತ್ತಿತರ ಕ್ರಮ ಕೈಗೊಂಡಿದ್ದಾರೆ.

ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ: ಸುರೇಶ ಯಾದವ

ಸುರೇಶಯಾದವ ಫೌಂಡೇಶನ್ ವತಿಯಿಂದ ಕ್ರೀಡಾಪಟುಗಳಿಗೆ ಸನ್ಮಾನ

ಬೆಳಗಾವಿ: ಛತ್ತಿಸಗಡರಾಜ್ಯದ ನಂದಗಾವ ನಗರದಲ್ಲಿ ನ.23ರಿಂದ 29 ವರೆಗೆ ನಡೆದ ಏಳನೇ ನ್ಯಾಷನಲ್ ವಿಲಚೇರ್ ಬಾಸ್ಕೆಟಬಾಲ್‌ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಬೆಳಗಾವಿ ಪುರುಷ ಮತ್ತು ಮಹಿಳಾ ತಂಡಗಳು ಎರಡನೇ ಸ್ಥಾನ ಪಡೆದುರಾಜ್ಯದಕೀರ್ತಿ ಹಚ್ಚಿಸಿದ್ದು, ಕ್ರೀಡಾಪಟುಗಳಿಗೆ ಶ್ರೀ ಸುರೇಶಯಾದವ ಫೌಂಡೇಶನ್‌ಅಧ್ಯಕ್ಷರಾದ ಸುರೇಶಯಾದವ ಅವರುಅಭಿನಂದನೆ ಸಲ್ಲಿಸಿ, ಸನ್ಮಾನಿಸಿದರು.

ಈ ವೇಳೆ ಅಧ್ಯಕ್ಷ ಸುರೇಶಯಾದವಅವರು ಮಾತನಾಡಿ, ಈ ನಾಡಿನ ಹೆಮ್ಮೆಯ ಕ್ರೀಡಾಪಟುಗಳು ವಿಲಚೇರ್ ಬಾಸ್ಕೆಟಬಾಲ್‌ಚಾಂಪಿಯನ್ ಶಿಪ್ ನಲ್ಲಿ ಜಯಗಳಿಸಿ ರಾಜ್ಯಕ್ಕೆಕೀರ್ತಿಯನ್ನುತಂದಿದ್ದಾರೆ. ಎಲ್ಲ ಕ್ರೀಡಾಪಟುಗಳಿಗೆ ಹಾಗೂ ತರಬೇತುದಾರರಾದ ವಿ. ಎಸ್. ಪಾಟೀಲ ಅವರಿಗೆ ನಮ್ಮ ಫೌಂಡೇಶನ್ ವತಿಯಿಂದ ಅಭಿನಂದನೆಗಳು ಸಲ್ಲಿಸುತ್ತೇನೆಎಂದರು.

ಅನೇಕ ಕ್ರೀಡಾಪಟುಗಳಿಗೆ ಉತ್ತಮ ವೇದಿಕೆ ಸಿಗದೇ ವಂಚಿತರಾಗಿದ್ದಾರೆ. ದೇಶದಕೀರ್ತಿ ಹೆಚ್ಚಿಸುವ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ, ಅವರನ್ನು ಬೆಳೆಸುವ ಕಾರ್ಯ ಮಾಡಬೇಕಿದೆ. ಹೀಗಾಗಿ ಸುರೇಶಯಾದವ ಫೌಂಡೇಶನ್‌ದಿಂದಎಲ್ಲ ಸಹಾಯ, ಸಹಕಾರ ನೀಡಲಾಗುವುದು. ಮುಂದಿನ ದಿನಗಳಲ್ಲಿ ರಾಷ್ಟ್ರ– ಅಂತರಾಷ್ಟ್ರೀಯ ಮಟ್ಟದಲ್ಲಿ ಮಿಂಚಬೇಕು ಎಂದು ಹಾರೈಸಿದರು.

ಪಂಧ್ಯದ ಗೆಲುವಿಗೆ ಶ್ರಮಿಸಿದ ಬೆಳಗಾವಿಯ ಆಟಗಾರಾದ ಪುರುಷರ ವಿಭಾಗದಲ್ಲಿ ಮಹಾಂತೇಶ್ ಹೊಂಗಲ, ಬಸಪ್ಪ ಸುನಾದೊಳಿ, ಸುರೇಶದಾಮನೇಕಾರ, ಶ್ರೀಕಾಂತ ದೇಸಾಯಿ, ಸಿದ್ದಪ್ಪ ಪಟುಗುಂದಿ, ದಿನೇಶ್ ಸಿದ್ದಗೋಳ, ಈರಣ್ಣ ಹೊಂಡಪ್ಪನವರ ಹಾಗೂ ಫಕೀರಪ್ಪಕರುವಿನಕೊಪ್ಪ ಮತ್ತು ಮಹಿಳಾ ವಿಭಾಗದಲ್ಲಿ ಗೆಲುವಿಗೆ ಪ್ರಮುಖ ಪಾತ್ರವಹಿಸಿದ ಬೆಳಗಾವಿಯ ಮಹಿಳಾ ಆಟಗಾರರಾದ ಮನಿಷಾ ಹೊಂಗಲ, ಲಕ್ಷ್ಮೀ ಪಾಯನ್ನವರ, ಆರತಿ ಗವಾಸ, ಮಹಾದೇವಿ ಯಡ್ರಾವಿ, ಮಾಯವ್ವ ಸನ್ನಿನಗನವರ, ರೀಜವಾನಜಮಾದಾರ

ನಿವೃತ್ತ ಪ್ರಾದೇಶಿಕ ಆಯುಕ್ತಎಮ್. ಜಿ. ಹಿರೇಮಠಅವರು ಮಾತನಾಡಿ, ಬಾಸ್ಕೆಟ್ಬಾಲ್ ವಿಶ್ವದಅತ್ಯಂತಜನಪ್ರಿಯ ವ್ಯಾಪಾಕವಾಗಿ ವೀಕ್ಷಿಸುವ ಕ್ರೀಡೆಗಳಲ್ಲಿ ಒಂದಾಗಿದೆ. ಈಗ ಸಾಮಾನ್ಯರಂತೆ ವಿಶೇಷಚೇತನರು ಬಾಸ್ಕೆಟಬಾಲ್‌ಆಟವನ್ನು ಆಡಿ ಕರ್ನಾಟಕರಾಜ್ಯಕ್ಕೆಕೀರ್ತಿತಂದಿದ್ದಾರೆ. ಇನ್ನೂ ಹೆಚ್ಚೆಚು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಳ್ಳಬೇಕು ಎಂದು ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಮಲ್ಲಾರ ದೀಕ್ಷಿತ್, ಪರುಶುರಾಮ ಮಂಡೋಲಕರ,ಸುರೇಶ ಶಿಂದೆ, ನಿರವಾಣಿ ಬೆಣಿ, ರಾಜು ಸಿಂದ್ರಿ ಗೂಳಪ್ಪ ಹೊಳೆಯಾಚಿ ಮುಂತಾದವರು ಉಪಸ್ಥಿತರಿದ್ದರು.

ಡಿಹೆಚ್‌ಒ ಕಿರುಕುಳಕ್ಕೆ ಬೇಸತ್ತು ವೈದ್ಯ ಆತ್ಮಹತ್ಯೆ

ಬೆಂಗಳೂರು: ಮಂಡ್ಯ ಡಿಹೆಚ್‌ಒ ಕಿರುಕುಳದಿಂದ ಬೇಸತ್ತ ವೈದ್ಯರೊಬ್ಬರು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ನಲ್ಲಿ ನಡೆದಿದೆ.

ನಟರಾಜ್ ಆತ್ಮಹತ್ಯೆಗೆ ಶರಣಾದ ವೈದ್ಯ. ಇವರು ಮಂಡ್ಯ ಆರೋಗ್ಯ ಇಲಾಖೆಯ ವೆಲ್‌ಫೇರ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಇಂದು ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ತಮ್ಮ ನಿವಾಸದಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೃದಯಾಘಾತಕ್ಕೊಳಗಾದ ಹಿನ್ನೆಲೆ ಕಳೆದ ಕೆಲ ದಿನಗಳಿಂದ ನಟರಾಜ್ ರಜೆಯಲ್ಲಿದ್ದರು. ಇಂದು ಮಂಡ್ಯಗೆ ಹೋಗಿ ರಿಪೋರ್ಟ್ ಮಾಡಿಕೊಳ್ಳಬೇಕಿತ್ತು. ಆದರೆ ಮಂಡ್ಯ ಡಿಹೆಚ್‌ಒ ಇವರಿಗೆ ರಿಪೋರ್ಟ್ ಮಾಡಿಕೊಳ್ಳದಂತೆ ಸೂಚನೆ ನೀಡಿದ್ದು, ಕಿರುಕುಳದಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಆರೋಪಿಸಲಾಗಿದೆ. ಬೆಟ್ಟಸ್ವಾಮಿ ಎಂಬ ಅಧಿಕಾರಿಯನ್ನು ಪಾಂಡವಪುರ ಟಿಹೆಚ್‌ಒ ಆಗಿ ವರ್ಗಾವಣೆ ಮಾಡಲಾಗಿತ್ತು. ಆದರೆ ಬೆಟ್ಟಸ್ವಾಮಿ ಪಾಂಡವಪುರದಲ್ಲಿ ರಿಪೋರ್ಟ್ ಮಾಡಿಕೊಂಡಿರಲಿಲ್ಲ. ಡಿಹೆಚ್‌ಒ ಬೆಟ್ಟಸ್ವಾಮಿ ಪರವಾಗಿ ಇದ್ದರು. ಈ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಶಂಕಿಸಲಾಗಿದೆ.

ಬೆಳಗಾವಿ: ಬಾವನ ಸವದತ್ತಿ ಗ್ರಾಮದ ಯೋಧ ಸಾವು

ಬೆಳಗಾವಿ: ಭಾರತೀಯ ಸೇನೆ ವತಿಯಿಂದ ನಡೆದ ಕ್ರೀಡೆಯಲ್ಲಿ ಗಾಯಗೊಂಡಿದ್ದ ರಾಯಬಾಗ ತಾಲೂಕಿನ ಬಾವನ ಸವದತ್ತಿ ಗ್ರಾಮದ ಯೋಧ ಸಾವನ್ನಪಿದ್ದಾರೆ.

ಬಾವನ ಸವದತ್ತಿ ಗ್ರಾಮದ ಅಶೋಕ ಬಾಪಕರ ಮೃತಪಟ್ಟ ಯೋಧ. ಇವರು 15 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಭಾರತೀಯ ಸೇನೆ ವತಿಯಿಂದ ನಡೆದ ಕ್ರೀಡಾಕೂಡದಲ್ಲಿ ಈ ಯೋಧ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ.

ಆದರೆ ದುರ್ವಿದಿ ಚಿಕಿತ್ಸೆ ಪಲಿಸದೇ ಯೋಧ ಅಶೋಕ ಸಾವನ್ನಪ್ಪಿದ್ದಾರೆ. ಮೃತ ಯೋಧ ತಂದೆ–ತಾಯಿ, ಪತ್ನಿ, ಓರ್ವ ಪುತ್ರ ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಸ್ವಗ್ರಾಮ ಬಾವನ ಸವದತ್ತಿಯಲ್ಲಿ ಸರ್ಕಾರಿ ಗೌರವದದೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತ ಯೋಧನ ಕುಟುಂಸ್ಥರು ತಿಳಿಸಿದ್ದಾರೆ.

ಮಹಿಳೆಯರ ಅಭಿವೃದ್ಧಿಗೆ ಸ್ವ–ಉದ್ಯೋಗ ಬ್ಯೂಟಿಷಿಯನ್ ಸಹಕಾರಿ: ಸತೀಶ ನಾಯ್ಕ

ಬೆಳಗಾವಿ: ಮಹಿಳೆಯರು ಅಭಿವೃದ್ಧಿ ಹೊಂದಲು ಸ್ವ–ಉದ್ಯೋಗ ಬ್ಯೂಟಿಷಿಯನ್ ಸಹಕಾರಿಯಾಗಲಿದೆ. ಪ್ರಸ್ತುತ ದಿನಗಳ ಮಾನಗಳಲ್ಲಿ ಬ್ಯೂಟಿಷಿಯನ್ ಬಹುಬೇಡಿಕೆ ಇದ್ದು, ಈ ಕೆಲಸದಿಂದ ಮಹಿಳೆಯರು ಜೀವನದಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳ ಬಹುದು ಎಂದು ಜಿಲ್ಲಾ ನಿರ್ದೇಶಕರಾದ ಸತೀಶ ನಾಯ್ಕ ಹೇಳಿದರು.

ತಾಲೂಕಿನ ಆದಿನಾಥ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬೆಳಗಾವಿ ತಾಲೂಕು ಹಾಗೂ ಡೆಪೋಡೈಲ್ ಸಲೂನ ಸಂಸ್ಥೆಯ ವತಿಯಿಂದ ಆಯೋಜಿಸಲಾದ ಮಜಗಾವಿ ಹಾಗೂ ಗಣೇಶಪೂರ ಸ್ವಸಹಾಯ ಸಂಘದ 100 ಸದಸ್ಯರ ಬ್ಯೂಟಿಷಿಯನ್ ಉಚಿತ ತರಬೇತಿಯ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ನಾತಕೋತ್ತರ ಪದವೀದದರು ಸಹ ಈ ಬ್ಯೂಟಿಷಿಯನ್ ತರಬೇತಿ ಪಡೆದು ಮದುವೆ ಸಮಾರಂಭಗಳಲ್ಲಿ ತಮದೇಆದ ಕೈಚಳಕ ತೋರಿ ಉತ್ತಮ ಆದಾಯ ಪಡೆಯುತ್ತಿದ್ದಾರೆ. ಈ ಹುಡುಗಿಯರು ಬ್ಯೂಟಿಷಿಯನ್ ಆಗಿ ಸ್ವಂತದುಡಿಮೆ ಆರಂಭಿಸಿದರೆ ಅವರು ಹೊರಗೆ ಹೋಗಬೇಕಾದ ಅಗತ್ಯವಿಲ್ಲ ಎಂದು ತಿಳಿಸಿದರು.

ಅಲ್ಪ ಅವಧಿಯ ತರಬೇತಿ ಮೂಲಕ ಕಾಲೇಜು ಅವಧಿ ನಂತರ ಮನೆಯಲ್ಲೇ ಕೇಶವಿನ್ಯಾಸ, ಐಬ್ರೋ, ಫೇಷಿಯಲ್, ಬ್ಲೀಚಿಂಗ್ ಸೇರಿದಂತೆ ಅನೇಕ ಸೌಂದರ್ಯ ವೃದ್ಧಿಸುವ ಕೆಲಸ ಮಾಡಿಕೊಳ್ಳ ಬಹುದಾಗಿದೆ.

ಈ ತರಬೇತಿಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಜತೆಗೆ ಹಣ ಉಳಿತಾಯ ಮಾಡುವ, ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಲು ಸಹಕಾರಿಯಾಗಿದೆ ಎಂದರು.

ಈ ವೇಳೆ ಸ್ವ–ಉದ್ಯೋಗ ಕಂಡುಕೊಳ್ಳಲು ಉದ್ದೇಶದಿಂದ ಒಂದು ತಿಂಗಳಲ್ಲಿ ಉಚಿತ ಬ್ಯೂಟಿಷನ್ ತರಬೇತಿಯನ್ನು ಪೂರ್ಣಗೊಳಿಸಿದ 100 ತರಬೇತಿದಾರರಿಗೆ ಹಿರಿಯ ವಕೀಲರು ಜು.ಆರ್ ಸೋನೆರ ಪ್ರಮಾಣ ಪತ್ರವನ್ನುರವರು ವಿತರಿಸಿದರು.

ಡೆಪೋಡೈಲ್ ಸಲೂನ್ ಸಂಸ್ಥೆಯ ಮುಖ್ಯಸ್ಥರಾದ ಪದ್ಮಜಾ ಮುತಗೇಕರರವರು ಸ್ವಉದ್ಯೋಗ ಕ್ಕೆ ಇರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಿದರು. ಮಹಿಳೆಯರಿಗೆ ಉತ್ತಮ ಆರೋಗ್ಯ ಬಗ್ಗೆ ಸುಜಾತಾ ಪಾಟೀಲ ರವರು ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಾಹುಬಲಿ ಕುಡಚಿ ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ದೀಪಕ್ ಸಾತಗೌಡ, ಮಿಲಿಂದ ಮುತಗೇಕರ, ಯೋಜನಾಧಿಕಾರಿ ನಾಗರಾಜ ಹಡ್ಲಿ, ಉಪನ್ಯಾಸಕರಾದ ಗೋಪಾಲ್ .ಯು, ಮೆಲ್ವಿಚಾರಕರಾದ ಪ್ರಭಾವತಿ ಯಾವಗಲ್, ಮಿನಾಕ್ಷಿ ಜುಗಳಿ ಸೇವಾ ಪ್ರತಿನಿಧಿಗಳಾದ ಮಂದಾಕಿಣಿ, ಸೈನಾಜದರ್ಗಾ, ರೇಖಾ, ರಾಜೇಶ್ವರಿ ಹಾಗೂ ಸ್ವ ಸಹಾಯ ಸಂಘದ ಸದಸ್ಯರು, ಡೆಪೋಡೈಲ್ ಸಂಸ್ಥೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ರಾಜ್ಯಮಟ್ಟದ ಬೃಹತ್ ವಧು–ವರಾನ್ವೇಷಣಾ ಸಮಾವೇಶವ ಕಾರ್ಯಕ್ರಮ

ಬೇಧ ಭಾವಗಳನ್ನು ಬದಿಗಿಟ್ಟು ಬ್ರಾಹ್ಮಣರು ಒಂದಾಗಿದ್ದಾರೆ: ಆನಂದ ಮಹಾರಾಜ

ಬೆಳಗಾವಿ: ನಮ್ಮ ಸಮಾಜದಲ್ಲಿ ಸ್ಮಾರ್ತ ಮತ್ತು ವೈಷ್ಣವ ಎಂಬ ಪಿಡುಗು ಎದ್ದು ಕಾಣುತಲಿತ್ತು, ಶಾಸ್ತ್ರಗಳಲ್ಲಿ ಎಲ್ಲಿಯೂ ಸ್ಮಾರ್ತ ಮತ್ತು ವೈಷ್ಣವವೆಂಬ ವಿಂಗಡನೆ ಇಲ್ಲವೇ ಇಲ್ಲ. ಇದೊಂದು ಪೂಜಾ ಪದ್ಧತಿ ಮಾತ್ರ. ಇಲ್ಲಿ ಬ್ರಾಹ್ಮಣರೆಲ್ಲರೂ ಒಂದಾಗಿದ್ದಾರೆ. ಎಲ್ಲ ಬೇಧ ಭಾವಗಳನ್ನು ಬದಿಗಿಟ್ಟು ಎಲ್ಲರೂ ಒಂದೇ ವೇದಿಕೆಯಲ್ಲಿ ಸೇರಿರುವುದು ಸಂತಸವನ್ನುಂಟು ಮಾಡಿದೆ ಎಂದು ಶ್ರೀ ಆನಂದ ಮಹಾರಾಜರು ಇಂದಿಲ್ಲಿ ಹೇಳಿದರು.

ಇಂದು ದಿ. 2 ಶನಿವಾರದಂದು ಮುಂ 11–30 ಕ್ಕೆ ನಗರದ ರಾಣಿಚೆನ್ನಮ್ಮ ನಗರದಲ್ಲಿರುವ ಶ್ರೀ ಸತ್ಯಪ್ರಮೋದ ಸಭಾಗೃಹದಲ್ಲಿ 51 ನೇ ರಾಜ್ಯಮಟ್ಟದ ಬೃಹತ್ ವಧು–ವರಾನ್ವೇಷಣಾ ಸಮಾವೇ